ಕರಾವಳಿ ಸುದ್ದಿ

ಅರಿವಿನತ್ತ ನಮ್ಮ ಚಿತ್ತ | KARAVALI SUDDI ENGLISH-KANNADA WEEKLY | ವಾರ ಪತ್ರಿಕೆ

Vol: 12 Issue: 27 KARBIL/2015/62120 DAKSHINA KANNADA 23-29 NOVEMBER 2026 Rs 10/-

'ಪ್ರತಿಯೊಂದು ಉದ್ದೇಶವು ಆಲೋಚನೆಯಿಂದ ಸಫಲವಾಗುವುದು.'

ವಂದೇ ಭಾರತ್ ಮೂಲಕ ಕರಾವಳಿಯ ದಶಕಗಳ ಕನಸು ನನಸು

ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರ ನಿರಂತರ ಪ್ರಯತ್ನಕ್ಕೆ ಒಲಿದ ಯಶಸ್ಸು

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಂದ ಮಂಗಳೂರು-ಬೆಂಗಳೂರು-ಗೋವಾ ವಂದೇ ಭಾರತ್ ರೈಲಿಗೆ ಹಸಿರು ನಿಶಾನೆ





ಕರಾವಳಿ ಕರ್ನಾಟಕದ ಜನತೆ ದಶಕಗಳಿಂದ ಕಾಣುತ್ತಿದ್ದ ವೇಗದ, ಸುಗಮ ಹಾಗೂ ಆಧುನಿಕ ರೈಲು ಸಂಪರ್ಕದ ಕನಸು ಇದೀಗ ನನಸಾಗುವತ್ತ ಮಹತ್ವದ ಹೆಜ್ಜೆಯಿಟ್ಟಿದೆ. ಮಂಗಳೂರು-ಬೆಂಗಳೂರು-ಗೋವಾ ನಡುವಿನ ಬಹುನಿರೀಕ್ಷಿತ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸೇವೆಯ ಆರಂಭವು ಕರಾವಳಿಯ ರೈಲ್ವೆ ಇತಿಹಾಸದಲ್ಲಿ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದೆ. ಈ ಮಹತ್ವದ ಸಾಧನೆಯ ಹಿಂದೆ ದಕ್ಷಿಣ ಕನ್ನಡದ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರ ನಿರಂತರ ಪ್ರಯತ್ನ, ದೂರದೃಷ್ಟಿ ಹಾಗೂ ಕೇಂದ್ರ ಸರ್ಕಾರದ ಮಟ್ಟದಲ್ಲಿ ಅವರು ನಡೆಸಿದ ಸತತ ಮನವಿಗಳು ಪ್ರಮುಖ ಪಾತ್ರ ವಹಿಸಿವೆ.

ಕರಾವಳಿ ಜನತೆಯ ಬಹುದಿನಗಳ ಬೇಡಿಕೆಯನ್ನು ಪರಿಣಾಮಕಾರಿಯಾಗಿ ಕೇಂದ್ರದ ಗಮನಕ್ಕೆ ತಂದು, ರೈಲ್ವೆ ಅಭಿವೃದ್ಧಿಗೆ ವೇಗ ನೀಡುವಲ್ಲಿ ಸಂಸದರಾದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ತೋರಿದ ಬದ್ಧತೆಗೆ ಇದೀಗ ಫಲ ದೊರೆತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವರ್ಚುವಲ್ ಸಮ್ಮುಖದಲ್ಲಿ ನೂತನ ವಂದೇ ಭಾರತ್ ರೈಲು ಸೇವೆಗೆ ಚಾಲನೆ ದೊರೆತಿದ್ದು, ಮಂಗಳೂರು ಜಂಕ್ಷನ್‌ನಲ್ಲಿ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಹಸಿರು ನಿಶಾನೆ ತೋರಿಸುವ ಮೂಲಕ ರೈಲಿನ ಸಂಚಾರಕ್ಕೆ ಅಧಿಕೃತ ಚಾಲನೆ ನೀಡಿದರು.

ಕರಾವಳಿಯ ಅಭಿವೃದ್ಧಿಗೆ ಚೌಟ ಅವರ ನಿರಂತರ ಪ್ರಯತ್ನದ ಫಲ: ಮಂಗಳೂರಿನ ರೈಲ್ವೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಲವು ವರ್ಷಗಳಿಂದ ಎದುರಾಗಿದ್ದ ಆಡಳಿತಾತ್ಮಕ ಹಾಗೂ ಕಾರ್ಯಾಚರಣೆಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಮಂಗಳೂರು ಕೊಂಕಣ ರೈಲ್ವೆ, ದಕ್ಷಿಣ ರೈಲ್ವೆ ಹಾಗೂ ನೈರುತ್ಯ ರೈಲ್ವೆ ವಲಯಗಳ ನಡುವೆ ಹಂಚಿಹೋಗಿರುವುದರಿಂದ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದಲ್ಲಿ ಎದುರಾಗುತ್ತಿದ್ದ ಸಮಸ್ಯೆಗಳನ್ನು ನಿವಾರಿಸಿ, ಮಂಗಳೂರಿಗೆ ಹೆಚ್ಚಿನ ಅದ್ಯತೆ ದೊರಕಿಸಿಕೊಡುವ ನಿಟ್ಟಿನಲ್ಲಿ ಅವರು ಕೇಂದ್ರದ ಗಮನ ಸೆಳೆದಿದ್ದರು. ಸಂಸತ್ತಿನಲ್ಲಿಯೂ ಕರಾವಳಿಯ ರೈಲ್ವೆ ಸಂಪರ್ಕದ ಅಗತ್ಯತೆಗಳನ್ನು ಪ್ರಸ್ತಾಪಿಸಿ, ಪ್ರಯಾಣಿಕರ ಅನುಕೂಲಕ್ಕಾಗಿ ಹಲವು ಬೇಡಿಕೆಗಳನ್ನು ಮುಂದಿಟ್ಟಿದ್ದರು. ಮಂಗಳೂರು-ಬೆಂಗಳೂರು ನಡುವಿನ ವೇಗದ ರೈಲು ಸಂಪರ್ಕದ ಜೊತೆಗೆ ಮಂಗಳೂರು-ಸುಬ್ರಹ್ಮಣ್ಯ ಪ್ಯಾಸೆಂಜರ್ ರೈಲು ಪುನರಾರಂಭದ ಪ್ರಯತ್ನವೂ ಈ ನಿಟ್ಟಿನಲ್ಲಿ ಗಮನಾರ್ಹವಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರ ಸಹಕಾರದೊಂದಿಗೆ ಕರಾವಳಿಯ ರೈಲ್ವೆ ಅಭಿವೃದ್ಧಿಗೆ ಹೊಸ ವೇಗ ದೊರೆಯುತ್ತಿರುವುದು ಸಂಸದ ಚೌಟ ಅವರ ಪ್ರಯತ್ನಕ್ಕೆ ಸಂದ ಮಹತ್ವದ ಯಶಸ್ಸಾಗಿದೆ.

ಮಂಗಳೂರು-ಬೆಂಗಳೂರು-ಗೋವಾ ನಡುವೆ ವಂದೇ ಭಾರತ್ ವೇಗದ ಸಂಪರ್ಕ: ಯಶವಂತಪುರ-ಮಂಗಳೂರು ಜಂಕ್ಷನ್-ಮಡಗಾಂವ್ ನಡುವಿನ ವಂದೇ ಭಾರತ್ ರೈಲು ಸೇವೆಯು ಕರ್ನಾಟಕದ ರಾಜಧಾನಿ, ಕರಾವಳಿ ಪ್ರದೇಶ ಹಾಗೂ ಗೋವಾ ನಡುವೆ ಆಧುನಿಕ ಸಂಪರ್ಕ ಸೇತುವೆಯಾಗಿದೆ. 16 ಬೋಗಿಗಳನ್ನು ಹೊಂದಿರುವ ಈ ರೈಲಿನಲ್ಲಿ ಎಕ್ಸಿಕ್ಯೂಟಿವ್ ಚೇರ್ ಕಾರ್ ಮತ್ತು ಚೇರ್ ಕಾರ್ ಸೌಲಭ್ಯಗಳಿವೆ. ನವೆಂಬರ್ 15ರಿಂದ ನಿಯಮಿತ ಸಂಚಾರ ಆರಂಭವಾಗಿದ್ದು, ವಾರದ ಆರು ದಿನ ರೈಲು ಸಂಚರಿಸಲಿದೆ. ಯಶವಂತಪುರದಿಂದ ಬೆಳಗ್ಗೆ 7.35ಕ್ಕೆ ಹೊರಡುವ ರೈಲು ಮಧ್ಯಾಹ್ನ 3.05ಕ್ಕೆ ಮಂಗಳೂರು ಜಂಕ್ಷನ್ ತಲುಪಲಿದೆ. ಅಲ್ಲಿಂದ ಮಧ್ಯಾಹ್ನ 3.15ಕ್ಕೆ ಹೊರಟು ರಾತ್ರಿ 8.55ಕ್ಕೆ ಮಡಗಾಂವ್ ತಲುಪಲಿದೆ. ಮರಳಿ ಪ್ರಯಾಣದಲ್ಲಿ ಮಡಗಾಂವ್‌ನಿಂದ ಬೆಳಗ್ಗೆ 8.20ಕ್ಕೆ ಹೊರಡುವ ರೈಲು ಮಧ್ಯಾಹ್ನ 1.50ಕ್ಕೆ ಮಂಗಳೂರು ತಲುಪಿ, 2 ಗಂಟೆಗೆ ಅಲ್ಲಿಂದ ಹೊರಟು ರಾತ್ರಿ 9.15ಕ್ಕೆ ಯಶವಂತಪುರ ತಲುಪಲಿದೆ. ಶ್ರವಣಬೆಳಗೊಳ, ಹಾಸನ, ಸಕಲೇಶಪುರ, ಸುಬ್ರಹ್ಮಣ್ಯ ರಸ್ತೆ, ಕಬಕ ಪುತ್ತೂರು, ಮಂಗಳೂರು ಜಂಕ್ಷನ್, ಉಡುಪಿ, ಕುಂದಾಪುರ, ಮೂಕಾಂಬಿಕಾ ರೋಡ್ ಬೈಂದೂರು, ಮುರ್ಡೇಶ್ವರ, ಗೋಕರ್ಣ ರಸ್ತೆ ಹಾಗೂ ಕಾರವಾರ ಪ್ರಮುಖ ನಿಲುಗಡೆಗಳಾಗಿವೆ.

ಬೆಂಗಳೂರು-ಮಂಗಳೂರು ನಡುವಿನ ಪ್ರಯಾಣವನ್ನು ಸುಮಾರು 7 ಗಂಟೆ 15 ನಿಮಿಷದಿಂದ 7 ಗಂಟೆ 30 ನಿಮಿಷಗಳ ಅವಧಿಯಲ್ಲಿ ಪೂರ್ಣಗೊಳಿಸುವ ನಿರೀಕ್ಷೆಯಿದೆ. ಇದರಿಂದ ಉದ್ಯೋಗಿಗಳು, ವಿದ್ಯಾರ್ಥಿಗಳು, ವ್ಯಾಪಾರಿಗಳು, ಪ್ರವಾಸಿಗರು ಹಾಗೂ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವ ಭಕ್ತಾದಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ.

ಕರಾವಳಿ ಪ್ರವಾಸೋದ್ಯಮಕ್ಕೆ ಹೊಸ ಉತ್ತೇಜನ : ವಂದೇ ಭಾರತ್ ರೈಲಿಗೆ ಉಡುಪಿ, ಕುಂದಾಪುರ ಹಾಗೂ ಬೈಂದೂರು ನಿಲ್ದಾಣಗಳಲ್ಲಿ ನಿಲುಗಡೆ ಕಲ್ಪಿಸಿರುವುದು ಕರಾವಳಿಯ ಪ್ರವಾಸೋದ್ಯಮ ಮತ್ತು ಧಾರ್ಮಿಕ ಕ್ಷೇತ್ರಗಳಿಗೆ ವಿಶೇಷ ಉತ್ತೇಜನ ನೀಡಲಿದೆ. ವಿಶೇಷವಾಗಿ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತಾದಿಗಳಿಗೆ ಈ ರೈಲು ಸಂಪರ್ಕ ಅನುಕೂಲಕರವಾಗಲಿದೆ. ಈ ನಿಲುಗಡೆಗಳಿಗಾಗಿ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು ನಡೆಸಿದ ಪ್ರಯತ್ನಗಳನ್ನೂ ರೈಲ್ವೆ ಸಚಿವರು ಶ್ಲಾಘಿಸಿದ್ದಾರೆ. ಕರಾವಳಿಯ ಪ್ರವಾಸಿ ತಾಣಗಳು, ಧಾರ್ಮಿಕ ಕೇಂದ್ರಗಳು ಹಾಗೂ ಸ್ಥಳೀಯ ವ್ಯಾಪಾರ ವಹಿವಾಟಿಗೆ ಇದರಿಂದ ಹೊಸ ಚೈತನ್ಯ ದೊರೆಯುವ ನಿರೀಕ್ಷೆಯಿದೆ.

ಘಾಟ್ ಮಾರ್ಗದ ಸವಾಲಿಗೆ ತಂತ್ರಜ್ಞಾನದ ಪರಿಹಾರ: ಮಂಗಳೂರು-ಬೆಂಗಳೂರು ರೈಲು ಸಂಪರ್ಕದ ವೇಗವರ್ಧನೆಗೆ ಪಶ್ಚಿಮ ಘಟ್ಟದ ಸುಬ್ರಹ್ಮಣ್ಯ ರಸ್ತೆ-ಸಕಲೇಶಪುರ ನಡುವಿನ ಘಾಟ್ ಮಾರ್ಗದ ವಿದ್ಯುದ್ದೀಕರಣ ಪ್ರಮುಖ ಸವಾಲಾಗಿತ್ತು. ಕಡಿದಾದ ಇಳಿಜಾರು ಹಾಗೂ ಭೌಗೋಳಿಕ ಅಡಚಣೆಗಳ ನಡುವೆಯೂ ರೈಲ್ವೆ ಇಲಾಖೆ ವಿದ್ಯುದ್ದೀಕರಣ ಕಾಮಗಾರಿಯನ್ನು ಪೂರ್ಣಗೊಳಿಸಿರುವುದು ಈ ಮಾರ್ಗದಲ್ಲಿ ವಿದ್ಯುತ್ ಚಾಲಿತ ರೈಲುಗಳ ಸಂಚಾರಕ್ಕೆ ಅನುಕೂಲ ಕಲ್ಪಿಸಿದೆ. ಘಾಟ್ ಪ್ರದೇಶದಲ್ಲಿ ರೈಲು ಸಂಚಾರದ ಸಾಮರ್ಥ್ಯ ಹೆಚ್ಚಿಸುವ ಉದ್ದೇಶದಿಂದ ಎರಡನೇ ರೈಲು ಮಾರ್ಗದ ಯೋಜನೆಯೂ ಪ್ರಗತಿಯಲ್ಲಿದೆ. ಸುಬ್ರಹ್ಮಣ್ಯ ರಸ್ತೆ ರೈಲ್ವೆ ನಿಲ್ದಾಣವನ್ನು ಅಮೃತ್ ಭಾರತ್ ನಿಲ್ದಾಣ ಯೋಜನೆಯಡಿ ಆಧುನಿಕ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸಲಾಗಿದೆ.

ಮಂಗಳೂರು ಸೆಂಟ್ರಲ್‌ಗೆ 94 ಕೋಟಿ ಅನುದಾನ: ಅಮೃತ್ ಭಾರತ್ ನಿಲ್ದಾಣ ಯೋಜನೆಯಡಿ ಮಂಗಳೂರು ಸೆಂಟ್ರಲ್ ರೈಲು ನಿಲ್ದಾಣದ ಸಮಗ್ರ ಅಭಿವೃದ್ಧಿಗಾಗಿ 94 ಕೋಟಿ ಅನುದಾನ ಮಂಜೂರು ಮಾಡಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಮಂಗಳೂರು ಜಂಕ್ಷನ್ ನಿಲ್ದಾಣದ ಮೇಲ್ದರ್ಜೆಗೇರಿಸುವಿಕೆ ಸೇರಿದಂತೆ ಪ್ರಯಾಣಿಕರ ಮೂಲಸೌಕರ್ಯ ಸುಧಾರಣೆಗೆ ಹಲವು ಯೋಜನೆಗಳು ರೂಪುಗೊಳ್ಳುತ್ತಿವೆ. ಪಾಂಡೇಶ್ವರ ರೈಲ್ವೆ ಕ್ರಾಸ್ ಸಮಸ್ಯೆಯನ್ನು ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಹಾಗೂ ಶಾಸಕ ಹರೀಶ್ ಪೂಂಜಾ ಅವರು ಸಚಿವರ ಗಮನಕ್ಕೆ ತಂದಿದ್ದು, ಸಮಸ್ಯೆ ಪರಿಹಾರಕ್ಕಾಗಿ ವಿಶೇಷ ತಂಡವನ್ನು ಕಳುಹಿಸುವ ಭರವಸೆಯೂ ದೊರೆತಿದೆ.

ಕೊಂಕಣ ರೈಲ್ವೆ ದ್ವಿಗುಣೀಕರಣಕ್ಕೂ ಆದ್ಯತೆ: ಉಡುಪಿಯ ಅಜ್ಜರಕಾಡಿನಲ್ಲಿ ನೂತನ ಎಫ್‌ಎಂ ಪ್ರಸಾರ ಕೇಂದ್ರವನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು ಕೊಂಕಣ ರೈಲ್ವೆ ಮಾರ್ಗದ ದ್ವಿಗುಣೀಕರಣ ತಮ್ಮ ಪ್ರಮುಖ ಗುರಿಗಳಲ್ಲಿ ಒಂದಾಗಿದೆ ಎಂದು ತಿಳಿಸಿದ್ದಾರೆ. ಕರ್ನಾಟಕ, ಕೇರಳ, ಗೋವಾ ಹಾಗೂ ಮಹಾರಾಷ್ಟ್ರ ರಾಜ್ಯಗಳ ಸಹಕಾರದೊಂದಿಗೆ ಕೊಂಕಣ ರೈಲ್ವೆಯನ್ನು ಭಾರತೀಯ ರೈಲ್ವೆಯೊಂದಿಗೆ ವಿಲೀನಗೊಳಿಸುವ ಪ್ರಸ್ತಾವನೆಯೂ ಚರ್ಚೆಯ ಹಂತದಲ್ಲಿದೆ ಎಂದು ಅವರು ತಿಳಿಸಿದ್ದಾರೆ. ಉಡುಪಿ ಜಿಲ್ಲೆಯ ಇಂದ್ರಾಳಿ ಹಾಗೂ ಬೈಂದೂರು ರೈಲ್ವೆ ನಿಲ್ದಾಣಗಳ ಅಭಿವೃದ್ಧಿಗೂ ಆದ್ಯತೆ ನೀಡುವುದಾಗಿ ಭರವಸೆ ನೀಡಿದ್ದಾರೆ.

ಕರಾವಳಿಯ ಭವಿಷ್ಯಕ್ಕೆ ಹೊಸ ವೇಗ: ಒಂದೆಡೆ ಮಂಗಳೂರು-ಬೆಂಗಳೂರು-ಗೋವಾ ನಡುವಿನ ವಂದೇ ಭಾರತ್ ರೈಲು ಸೇವೆ ಕರಾವಳಿಯ ದಶಕಗಳ ಕನಸಿಗೆ ವೇಗ ನೀಡುತ್ತಿದ್ದರೆ, ಮತ್ತೊಂದೆಡೆ ಬೆಂಗಳೂರಿನ ಪಿಂಕ್ ಮೆಟ್ರೋ ಹಾಗೂ ಡಬಲ್ ಡೆಕ್ಕರ್ ಯೋಜನೆಗಳು ರಾಜ್ಯದ ನಗರ ಸಾರಿಗೆ ಅಭಿವೃದ್ಧಿಗೆ ಹೊಸ ದಿಕ್ಕು ತೋರಿಸುತ್ತಿವೆ. ವಿಶೇಷವಾಗಿ ವಂದೇ ಭಾರತ್ ರೈಲು ಸೇವೆಯ ಸಾಕಾರದಲ್ಲಿ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರ ನಿರಂತರ ಪ್ರಯತ್ನ, ಜನಪರ ಕಾಳಜಿ ಹಾಗೂ ಕೇಂದ್ರ ಸರ್ಕಾರದೊಂದಿಗೆ ನಡೆಸಿದ ಸಮನ್ವಯ ಗಮನಾರ್ಹವಾಗಿದೆ. ಜನರ ಬಹುದಿನಗಳ ಬೇಡಿಕೆಯನ್ನು ಅಭಿವೃದ್ಧಿಯ ಯೋಜನೆಯಾಗಿ ಪರಿವರ್ತಿಸುವಲ್ಲಿ ಅವರು ತೋರಿದ ಬದ್ಧತೆ ಕರಾವಳಿ ಜನತೆಯ ಮೆಚ್ಚುಗೆಗೆ ಪಾತ್ರವಾಗಿದೆ. ಈ ಹೊಸ ರೈಲು ಸಂಪರ್ಕವು ಕೇವಲ ಪ್ರಯಾಣದ ವೇಗವನ್ನಷ್ಟೇ ಹೆಚ್ಚಿಸದೆ, ಕರಾವಳಿಯ ಆರ್ಥಿಕತೆ, ಪ್ರವಾಸೋದ್ಯಮ, ವ್ಯಾಪಾರ, ಶಿಕ್ಷಣ ಹಾಗೂ ಉದ್ಯೋಗಾವಕಾಶಗಳ ಬೆಳವಣಿಗೆಗೂ ಮಹತ್ವದ ಕೊಡುಗೆ ನೀಡುವ ನಿರೀಕ್ಷೆಯಿದೆ. ಕರಾವಳಿ ಕರ್ನಾಟಕದ ರೈಲ್ವೆ ಇತಿಹಾಸದಲ್ಲಿ ವಂದೇ ಭಾರತ್ ಹೊಸ ಮೈಲಿಗಲ್ಲಾಗಲಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಯೋಜನೆಗಳಿಗೆ ಇದು ಪ್ರೇರಣೆಯಾಗಲಿ ಎಂಬುದು ಜನತೆಯ ಆಶಯ.

ಬೆಂಗಳೂರಿಗೆ ಪಿಂಕ್ ಮೆಟ್ರೋ ಕಿರೀಟ; ಡಬಲ್ ಡೆಕ್ಕರ್ ವ್ಯವಸ್ಥೆಗೆ ಹೊಸ ಆಯಾಮ

ಇದೇ ಸಂದರ್ಭದಲ್ಲಿ ರಾಜ್ಯದ ರಾಜಧಾನಿ ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೂ ಮತ್ತೊಂದು ಮಹತ್ವದ ಸೇರ್ಪಡೆಯಾಗಿದೆ. ನಗರದ ಮೆಟ್ರೋ ಸಂಪರ್ಕ ಜಾಲವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಪಿಂಕ್ ಮೆಟ್ರೋ ಮಾರ್ಗದ ರೈಲು ಸಂಚಾರಕ್ಕೆ ನವೆಂಬರ್ 13ರಂದು ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಾವರೆಕೆರೆ ಮೆಟ್ರೋ ನಿಲ್ದಾಣದಲ್ಲಿ ಹಸಿರು ನಿಶಾನೆ ತೋರಿಸಿದರು. ಈ ಸಂದರ್ಭದಲ್ಲಿ ರಾಜ್ಯಪಾಲರಾದ ಡಾ. ಸುಧಾ ಯಾದವ್, ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಹಾಗೂ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಉಪಸ್ಥಿತರಿದ್ದರು. ಉದ್ಘಾಟನೆಯ ಬಳಿಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ಕೃಷ್ಣ ಬೈರೇಗೌಡ ಅವರು ಪಿಂಕ್ ಲೈನ್‌ನ ಮಾದರಿ ನಕ್ಷೆಯ ಮೂಲಕ ಪ್ರಧಾನಮಂತ್ರಿಯ ವರಿಗೆ ಮಾರ್ಗದ ವಿನ್ಯಾಸ, ವಿವಿಧ ನಿಲ್ದಾಣಗಳ ಸಂಪರ್ಕ ವ್ಯವಸ್ಥೆ ಹಾಗೂ ಯೋಜನೆಯ ಮಹತ್ವವನ್ನು ವಿವರಿಸಿದರು. ಬೆಂಗಳೂರಿನ ಹೆಚ್ಚುತ್ತಿರುವ ವಾಹನ ದಟ್ಟಣೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಡಬಲ್ ಡೆಕ್ಕರ್ ಸಾರಿಗೆ ವ್ಯವಸ್ಥೆಯೂ ಮಹತ್ವದ ಹೆಜ್ಜೆಯಾಗಿದೆ. ಒಂದೇ ಮೂಲಸೌಕರ್ಯ ವ್ಯವಸ್ಥೆಯಲ್ಲಿ ಮೆಟ್ರೋ ಹಾಗೂ ರಸ್ತೆ ಸಂಚಾರಕ್ಕೆ ಅವಕಾಶ ಕಲ್ಪಿಸುವ ಈ ಪರಿಕಲ್ಪನೆಯು ರಸ್ತೆ ಬಳಕೆಯ ಒತ್ತಡ ಕಡಿಮೆ ಮಾಡುವುದರ ಜೊತೆಗೆ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಸಾಮರ್ಥ್ಯವನ್ನು ಹೆಚ್ಚಿಸುವ ನಿರೀಕ್ಷೆಯಿದೆ. ಮೆಟ್ರೋ ಸಂಪರ್ಕ ವಿಸ್ತರಣೆ ಹಾಗೂ ಡಬಲ್ ಡೆಕ್ಕರ್ ವ್ಯವಸ್ಥೆಯಂತಹ ಆಧುನಿಕ ಯೋಜನೆಗಳು ಬೆಂಗಳೂರಿನ ನಗರಾಭಿವೃದ್ಧಿಗೆ ಹೊಸ ಆಯಾಮ ನೀಡಲಿವೆ.

12 ದಿನಗಳ ಸಂಗೀತ ಸಂಭ್ರಮಕ್ಕೆ ವಿಶ್ವದಾಖಲೆಯ ಕಿರೀಟ

ಮಾಂಡ್ ಸೊಭಾಣ್‌ನಿಂದ ಕೊಂಕಣಿ ಇತಿಹಾಸ ಸೃಷ್ಟಿ!

7,235 ಗಾಯಕರ ಸಂಗೀತ ಸಂಭ್ರಮಕ್ಕೆ ಡಾ. ರೊನಾಲ್ಡ್ ಕೊಲಾಸೊ ಮೆಚ್ಚುಗೆ - 'ಇದು ಕೊಂಕಣಿ ಸಂಸ್ಕೃತಿಯ ವಿಜಯ' ಎಂದು ಬಣ್ಣನೆ







ಕೊಂಕಣಿ ಭಾಷೆ, ಸಂಗೀತ ಮತ್ತು ಸಂಸ್ಕೃತಿಯ ಇತಿಹಾಸದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸುವ ಮೂಲಕ ಸಾಂಸ್ಕೃತಿಕ ಸಂಘಟನೆ ಮಾಂಡ್ ಸೊಭಾಣ್ ವಿಶ್ವದ ಗಮನ ಸೆಳೆದಿದೆ. ಪ್ರಥಮ ವಿಶ್ವ ಕೊಂಕಣಿ ಸಂಗೀತ ಮಹಾ ಸಮ್ಮೇಳನದ ಅಂಗವಾಗಿ 'ಬಹು ಗಾಯಕರ ವಿಭಾಗ'ದಲ್ಲಿ ಸತತ 12 ದಿನ, 12 ಗಂಟೆ ಹಾಗೂ 12 ನಿಮಿಷಗಳ ಕಾಲ ನಿರಂತರ ಗಾಯನ ಪ್ರಸ್ತುತಪಡಿಸಿ ಐತಿಹಾಸಿಕ ವಿಶ್ವದಾಖಲೆಯನ್ನು ನಿರ್ಮಿಸಿದೆ. 300 ತಂಡಗಳು, 7,235 ಗಾಯಕರು ಹಾಗೂ 4,596 ಹಾಡುಗಳು ಒಂದೇ ವೇದಿಕೆಯಲ್ಲಿ ಸಂಗಮಗೊಂಡ ಈ ಅಭೂತಪೂರ್ವ ಸಾಧನೆ ಕೊಂಕಣಿ ಸಂಗೀತ ಲೋಕದಲ್ಲಿ ಹೊಸ ಸಂಚಲನ ಮೂಡಿಸಿದೆ. ಮಾಂಡ್ ಸೊಭಾಣ್ ಆಯೋಜಿಸಿದ್ದ ಈ ಐತಿಹಾಸಿಕ ಸಂಗೀತ ಯಜ್ಞದ ಭವ್ಯ ಸಮಾರೋಪ ಹಾಗೂ ವಿಶ್ವದಾಖಲೆ ಘೋಷಣಾ ಸಮಾರಂಭವು ಮಾಂಡ್ ಸೊಭಾಣ್ ಗೀತೆಯೊಂದಿಗೆ ಆರಂಭಗೊಂಡಿತು. ಸಂಸ್ಥೆಯ ಅಧ್ಯಕ್ಷ ಲುವಿ ಜೆ. ಪಿಂಟೊ ಅವರು ಗಣ್ಯರನ್ನು ಪುಷ್ಪಗುಚ್ಛ ನೀಡಿ ಆತ್ಮೀಯವಾಗಿ ಸ್ವಾಗತಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಖ್ಯಾತ ದಾನಿ ಡಾ. ರೊನಾಲ್ಡ್ ಕೊಲಾಸೊ ಅವರು ಮಾಂಡ್ ಸೊಭಾಣ್‌ನ ಸಂಘಟನಾ ಸಾಮರ್ಥ್ಯ, ಶಿಸ್ತು, ಬದ್ಧತೆ ಮತ್ತು ಸಾಧನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು. 'ಇದು ಕೇವಲ ವಿಶ್ವದಾಖಲೆಯಲ್ಲ, ಕೊಂಕಣಿ ಸಂಸ್ಕೃತಿಯ ವಿಜಯ' ಎಂದು ಬಣ್ಣಿಸಿದ ಅವರು, ಈ ಸಾಧನೆ ದಾಖಲೆಗಳ ಪುಸ್ತಕದಲ್ಲಿ ಮಾತ್ರವಲ್ಲದೆ ಜನರ ಹೃದಯದಲ್ಲಿಯೂ ಶಾಶ್ವತವಾಗಿ ಉಳಿಯಲಿದೆ ಎಂದರು.

'ದಾಖಲೆಗಳನ್ನು ನಿರ್ಮಿಸುವುದರಲ್ಲಿ ಹಾಗೂ ಅದ್ಭುತ ಕಾರ್ಯಕ್ರಮಗಳನ್ನು ಆಯೋಜಿಸುವುದರಲ್ಲಿ ಮಾಂಡ್ ಸೊಭಾಣ್ ಸದಾ ಮುಂಚೂಣಿಯಲ್ಲಿದೆ. ಈ ಹಿಂದೆ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಭಾರತದ ರಾಷ್ಟ್ರಪತಿಗಳನ್ನೇ ಕರೆತಂದ ಹೆಗ್ಗಳಿಕೆ ಈ ಸಂಸ್ಥೆಗಿದೆ. ಇದೀಗ ಬಹು ಗಾಯಕರ ವಿಭಾಗದಲ್ಲಿ 12 ದಿನಗಳಿಗೂ ಹೆಚ್ಚು ಕಾಲ ನಿರಂತರ ಗಾಯನ ನಡೆಸಿರುವುದು ನಿಜಕ್ಕೂ ಅಸಾಧಾರಣ ಸಾಧನೆ' ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಕರಾವಳಿ ಕರ್ನಾಟಕವು ಶಿಕ್ಷಣ, ಬ್ಯಾಂಕಿಂಗ್, ಸಿನಿಮಾ, ಕ್ರೀಡೆ ಹಾಗೂ ಸಮಾಜಸೇವೆಯಲ್ಲಿ ದೇಶಕ್ಕೆ ಮಾದರಿಯಾಗಿದೆ. ಅಂತೆಯೇ ಮಾಂಡ್ ಸೊಭಾಣ್ ಮತ್ತೊಂದು ಐತಿಹಾಸಿಕ ದಾಖಲೆ ನಿರ್ಮಿಸಿರುವುದು

ಸಂಪಾದಕೀಯ

– ರೋಷನ್ ಬೊನಿಫಾಸ್ ಮಾರ್ಟಿಸ್



ಕರಾವಳಿಯ ಕನಸಿಗೆ ವಂದೇ ಭಾರತ್ ವೇಗ!

ಕರಾವಳಿ ಕರ್ನಾಟಕದ ಜನತೆ ದಶಕಗಳಿಂದ ಕಾಣುತ್ತಿದ್ದ ಮಂಗಳೂರು–ಬೆಂಗಳೂರು ನಡುವಿನ ವೇಗದ, ಸುಗಮ ಹಾಗೂ ಆಧುನಿಕ ರೈಲು ಸಂಪರ್ಕದ ಕನಸು ಇಂದು ನನಸಾಗಿದೆ. ಯಶವಂತಪುರ–ಮಂಗಳೂರು ಜಂಕ್ಷನ್–ಮಡಗಾಂವ್ ನಡುವೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸೇವೆ ಆರಂಭವಾಗಿರುವುದು ಕರಾವಳಿಯ ರೈಲ್ವೆ ಇತಿಹಾಸದಲ್ಲಿ ಹೊಸ ಮೈಲಿಗಲ್ಲು. ಇದು ಕೇವಲ ಹೊಸ ರೈಲು ಸೇವೆಯಲ್ಲ; ಕರಾವಳಿಯ ಜನರ ಬಹುದಿನಗಳ ಆಶಯಕ್ಕೆ ದೊರೆತ ಗೌರವ, ಅಭಿವೃದ್ಧಿಯ ಪಯಣಕ್ಕೆ ಸಿಕ್ಕ ಹೊಸ ವೇಗ.

ಈ ಮಹತ್ವದ ಸಾಧನೆಯ ಹಿಂದೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವ, ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರ ಕಾರ್ಯದಕ್ಷತೆ ಹಾಗೂ ದಕ್ಷಿಣ ಕನ್ನಡದ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರ ನಿರಂತರ ಪ್ರಯತ್ನಗಳು ಪ್ರಮುಖ ಪಾತ್ರ ವಹಿಸಿವೆ. ವಿಶೇಷವಾಗಿ ಕರಾವಳಿ ಭಾಗದ ರೈಲ್ವೆ ಸಮಸ್ಯೆಗಳನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು, ಮಂಗಳೂರು ರೈಲ್ವೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ದೊರಕಿಸಿಕೊಡಲು ಅವರು ನಡೆಸಿದ ಪ್ರಯತ್ನಗಳು ನಿಜಕ್ಕೂ ಅಭಿನಂದನಾರ್ಹ. ಜನಪ್ರತಿನಿಧಿಯೊಬ್ಬರ ನಿಜವಾದ ಯಶಸ್ಸು ತನ್ನ ಕ್ಷೇತ್ರದ ಜನರ ಕನಸುಗಳನ್ನು ನನಸಾಗಿಸುವುದರಲ್ಲಿ ಅಡಗಿದೆ. ಆ ದೃಷ್ಟಿಯಿಂದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಕರಾವಳಿ ಕನ್ನಡಿಗರಿಗೆ ನೀಡಿರುವ ಈ ಕೊಡುಗೆ ಅತ್ಯಂತ ಮಹತ್ವದ್ದಾಗಿದೆ. ಮಂಗಳೂರು ರೈಲ್ವೆ ಸಂಪರ್ಕವು ವಿವಿಧ ರೈಲ್ವೆ ವಲಯಗಳ ಅಡಳಿತಾತ್ಮಕ ವ್ಯಾಪ್ತಿಯಲ್ಲಿ ಹಂಚಿಹೋಗಿರುವುದರಿಂದ ಅಭಿವೃದ್ಧಿ ಕಾರ್ಯಗಳಿಗೆ ಎದುರಾಗುತ್ತಿದ್ದ ಸಮಸ್ಯೆಗಳನ್ನು ನಿವಾರಿಸಲು ಅವರು ನಿರಂತರವಾಗಿ ಧ್ವನಿ ಎತ್ತಿದ್ದಾರೆ. ಸಂಸತ್ತಿನಲ್ಲಿಯೂ ಕರಾವಳಿಯ ರೈಲ್ವೆ ಬೇಡಿಕೆಗಳನ್ನು ಪ್ರಸ್ತಾಪಿಸಿ, ಕೇಂದ್ರ ಸಚಿವಾಲಯದ ಮಟ್ಟದಲ್ಲಿ ಅವುಗಳಿಗೆ ಸ್ಪಂದನೆ ದೊರಕಿಸುವಲ್ಲಿ ಶ್ರಮಿಸಿದ್ದಾರೆ. ಅವರ ಈ ಬದ್ಧತೆ ಇಂದು ಫಲ ನೀಡಿರುವುದು ಸಂತಸದ ಸಂಗತಿ.

ದೇಶದ ಪ್ರತಿಯೊಂದು ಪ್ರದೇಶಕ್ಕೂ ಆಧುನಿಕ ಸಾರಿಗೆ ಸೌಲಭ್ಯ ಒದಗಿಸಬೇಕೆಂಬ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಂಕಲ್ಪ ವಂದೇ ಭಾರತ್ ರೈಲುಗಳ ಮೂಲಕ ಸಾಕಾರಗೊಳ್ಳುತ್ತಿದೆ. ಭಾರತೀಯ ರೈಲ್ವೆಯನ್ನು ಹೊಸ ತಂತ್ರಜ್ಞಾನ ಮತ್ತು ಆಧುನಿಕ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸುವ ಅವರ ದೂರದೃಷ್ಟಿ ಪ್ರಶಂಸನೀಯ. ಅದೇ ರೀತಿ ಕರಾವಳಿಯ ಜನರ ಬೇಡಿಕೆಗಳಿಗೆ ಸ್ಪಂದಿಸಿ, ಮಂಗಳೂರು ಜಂಕ್ಷನ್‌ನಲ್ಲಿ ರೈಲಿಗೆ ಹಸಿರು ನಿಶಾನೆ ತೋರಿದ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೂ ಅಭಿನಂದನೆ ಸಲ್ಲಿಸಲೇಬೇಕು. ಮಂಗಳೂರು–ಬೆಂಗಳೂರು–ಗೋವಾ ನಡುವಿನ ಈ ರೈಲು ಸಂಪರ್ಕವು ಪ್ರಯಾಣಿಕರಿಗೆ ಮಾತ್ರವಲ್ಲದೆ ವ್ಯಾಪಾರ, ಶಿಕ್ಷಣ, ಉದ್ಯೋಗ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಿಗೂ ಹೊಸ ಅವಕಾಶಗಳನ್ನು ತೆರೆದಿಡಲಿದೆ. ಉಡುಪಿ, ಕುಂದಾಪುರ, ಬೈಂದೂರು ಸೇರಿದಂತೆ ಕರಾವಳಿಯ ಪ್ರಮುಖ ಸ್ಥಳಗಳಲ್ಲಿ ನಿಲುಗಡೆ ಕಲ್ಪಿಸಿರುವುದು ಪ್ರವಾಸೋದ್ಯಮ ಮತ್ತು ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗೆ ಪೂರಕವಾಗಲಿದೆ. ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ತೆರಳುವ ಭಕ್ತಾದಿಗಳಿಗೂ ಇದರಿಂದ ಅನುಕೂಲವಾಗಲಿದೆ. ಬೆಂಗಳೂರಿನ ಜನರಿಗೆ ಕರಾವಳಿಯ ಸೌಂದರ್ಯವನ್ನು ಆಸ್ವಾದಿಸಲು ಮತ್ತು ಕರಾವಳಿಯ ಜನರಿಗೆ ರಾಜಧಾನಿಯನ್ನು ಸುಲಭವಾಗಿ ತಲುಪಲು ಉತ್ತಮ ಅವಕಾಶ ದೊರೆತಿದೆ.

ಇದರೊಂದಿಗೆ ಮಂಗಳೂರು ಸೆಂಟ್ರಲ್ ರೈಲು ನಿಲ್ದಾಣದ ಅಭಿವೃದ್ಧಿಗೆ 94 ಕೋಟಿ ಅನುದಾನ, ಫಾಟ್ ಮಾರ್ಗದ ವಿದ್ಯುದ್ದೀಕರಣ, ಸುಬ್ರಹ್ಮಣ್ಯ ರಸ್ತೆ ನಿಲ್ದಾಣದ ಆಧುನೀಕರಣ ಹಾಗೂ ಕೊಂಕಣ ರೈಲ್ವೆ ದ್ವಿಗುಣೀಕರಣದಂತಹ ಯೋಜನೆಗಳು ಕರಾವಳಿಯ ಭವಿಷ್ಯದ ರೈಲ್ವೆ ಅಭಿವೃದ್ಧಿಗೆ ಆಶಾದಾಯಕ ಬೆಳವಣಿಗೆಗಳಾಗಿವೆ. ಆದರೆ ವಂದೇ ಭಾರತ್ ರೈಲು ಸೇವೆಯ ಆರಂಭವೇ ಅಂತಿಮ ಸಾಧನೆಯಾಗಬಾರದು. ಕರಾವಳಿಗೆ ಇನ್ನಷ್ಟು ರೈಲು ಸಂಪರ್ಕಗಳು, ಉತ್ತಮ ನಿಲ್ದಾಣ ಸೌಲಭ್ಯಗಳು ಹಾಗೂ ರೈಲ್ವೆ ಮೂಲಸೌಕರ್ಯಗಳ ಅಭಿವೃದ್ಧಿ ಅಗತ್ಯವಿದೆ. ಈ ನಿಟ್ಟಿನಲ್ಲಿ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ತಮ್ಮ ಪ್ರಯತ್ನಗಳನ್ನು ಮುಂದುವರಿಸಿ ಕರಾವಳಿಯ ಜನರ ಇನ್ನಷ್ಟು ಬೇಡಿಕೆಗಳಿಗೆ ಸ್ಪಂದನೆ ದೊರಕಿಸಿಕೊಡಲಿ ಎಂಬುದು ನಮ್ಮ ಆಶಯ. ಒಂದು ಜನಪ್ರತಿನಿಧಿ ತನ್ನ ಕ್ಷೇತ್ರದ ಜನರ ಬಹುದಿನಗಳ ಕನಸನ್ನು ನನಸಾಗಿಸಲು ಶ್ರಮಿಸಿದಾಗ, ಆ ಸೇವೆ ಜನರ ಹೃದಯದಲ್ಲಿ ಶಾಶ್ವತವಾಗಿ ಉಳಿಯುತ್ತದೆ. ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರ ಈ ಪ್ರಯತ್ನ ಅಂತಹದ್ದೇ ಒಂದು ಸಾರ್ಥಕ ಸೇವೆ. ಕರಾವಳಿಯ ಜನರ ಪರವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಕೃತಜ್ಞತೆಗಳು. ಈ ಮಹತ್ವದ ಯೋಜನೆ ಸಾಕಾರಗೊಳ್ಳಲು ನಿರಂತರವಾಗಿ ಶ್ರಮಿಸಿದ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರಿಗೆ ವಿಶೇಷ ಅಭಿನಂದನೆಗಳು.

ಕರಾವಳಿಯ ಜನರ ಬಹುದಿನಗಳ ಕನಸನ್ನು ನನಸಾಗಿಸಿದ ಈ ಕೊಡುಗೆಗಾಗಿ ಕರಾವಳಿ ಕನ್ನಡಿಗರು ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರಿಗೆ ಚಿರಋಣಿಗಳಾಗಿರುತ್ತಾರೆ. ಅಭಿವೃದ್ಧಿಯ ಈ ವೇಗ ಮುಂದುವರಿಯಲಿ, ಕರಾವಳಿ ಮತ್ತಷ್ಟು ಪ್ರಗತಿಯ ಪಥದಲ್ಲಿ ಮುನ್ನಡೆಯಲಿ. ವಂದೇ ಭಾರತ್ ರೈಲಿನ ಆಗಮನ ಕರಾವಳಿಯ ಹೊಸ ಭವಿಷ್ಯಕ್ಕೆ ನಾಂದಿಯಾಗಲಿ!

– ಸಂ.

ಕರಾವಳಿ ಸುದ್ದಿ
KARBIL/2015/62120 DAKSHINA KANNADA
ಸಂಪಾದಕ, ಪ್ರಕಾಶಕ ಮತ್ತು ಮುದ್ರಕ :
ರೋಷನ್ ಬೊನಿಫಾಸ್ ಮಾರ್ಟಿಸ್
ಕಛೇರಿ ವಿಳಾಸ :
ಕರಾವಳಿ ಸುದ್ದಿ ವಾರ ಪತ್ರಿಕೆ
ಕಟ್ಟಡ ನಂಬರ್ 2-69/2ಜಿ, ನಿತ್ಯಾದಾರ್ ಮ್ಯಾನ್ಷನ್ ಹತ್ತಿರ, ಮಾಣಿ ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ - 574 253.
ದೂರವಾಣಿ ಸಂಖ್ಯೆ : +91 84314 26747 ವೆಬ್‌ಸೈಟ್ : karavalisuddi.com
ಇ-ಮೇಯ್ಲ್ : karavalisuddidk@gmail.com

ಮಾರುಕಟ್ಟೆಯಲ್ಲಿ ಲಭ್ಯ
Merchant Name : KARAVALI SUDDI
Account No.: 42208429806
IFSC : SBIN0003823
UPI ID : karavalisuddi9806@sbi
SCAN & PAY
ಕರಾವಳಿ ಸುದ್ದಿ
SUBSCRIPTION
YEARLY : RS 500
2 YEARS : RS 1000
5 YEARS : RS 2500
10 YEARS : RS 5000
PhonePe paytm BHIM

ಮೂರು ದಶಕಗಳ ಪತ್ರಿಕಾ ಸೇವೆಗೆ ಪ್ರತಿಷ್ಠಿತ ಮನ್ನಣೆ

ಹಿರಿಯ ಪತ್ರಕರ್ತ ಪಿ.ಬಿ. ಹರೀಶ್ ರೈ ಅವರಿಗೆ ರಾಜ್ಯಮಟ್ಟದ ಸಹಕಾರಿ ಸಪ್ತಾಹ ಪ್ರಶಸ್ತಿಯ ಗೌರವ



ಪತ್ರಿಕೋದ್ಯಮದಲ್ಲಿ ಮೂರು ದಶಕಗಳಿಗೂ ಅಧಿಕ ಕಾಲ ನಿಷ್ಠೆ, ಬದ್ಧತೆ ಮತ್ತು ಸಾಮಾಜಿಕ ಕಳಕಳಿಯೊಂದಿಗೆ ಸೇವೆ ಸಲ್ಲಿಸುತ್ತಿರುವ ಹಿರಿಯ ಪತ್ರಕರ್ತ, ಮಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷ ಪಿ.ಬಿ. ಹರೀಶ್ ರೈ ಅವರಿಗೆ 73ನೇ ಸಹಕಾರ ಸಪ್ತಾಹದ ಅಂಗವಾಗಿ ನೀಡಲಾಗುವ ರಾಜ್ಯಮಟ್ಟದ ಗೌರವ ಪ್ರಶಸ್ತಿ ಲಭಿಸಿದೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ವತಿಯಿಂದ ಪತ್ರಿಕಾ ರಂಗದ ಸೇವೆಯನ್ನು ಗುರುತಿಸಿ ನೀಡಲಾಗುವ ಈ ಪ್ರತಿಷ್ಠಿತ ಪ್ರಶಸ್ತಿಗೆ ಹರೀಶ್ ರೈ ಅವರು ಆಯ್ಕೆಯಾಗಿದ್ದಾರೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರ ಕುಮಾರ್ ತಿಳಿಸಿದ್ದಾರೆ.

ಪತ್ರಿಕೋದ್ಯಮದಲ್ಲಿ ಸುಮಾರು ಮೂರು ದಶಕಗಳ ಅನುಭವ ಹೊಂದಿರುವ ಹರೀಶ್ ರೈ, ವೃತ್ತಿಪರ ಬದ್ಧತೆ, ಜನಪರ ಕಾಳಜಿ ಹಾಗೂ ಪತ್ರಕರ್ತರ ಸಂಘಟನಾತ್ಮಕ ಚಟುವಟಿಕೆಗಳಲ್ಲಿನ ಸಕ್ರಿಯತೆಯಿಂದ ವಿಶಿಷ್ಟ ಗುರುತನ್ನು ಗಳಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ, ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ರಾಷ್ಟ್ರೀಯ ಮಂಡಳಿ ಸದಸ್ಯರಾಗಿ ಹಾಗೂ ಐನೆಕಿದು–ಸುಬ್ರಹ್ಮಣ್ಯ ಸೇವಾ ಸಹಕಾರಿ ಬ್ಯಾಂಕಿನ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ವಿಜಯವಾಣಿ ದಿನಪತ್ರಿಕೆಯ ಮುಖ್ಯ ವರದಿಗಾರರಾಗಿದ್ದಾರೆ. ಪತ್ರಿಕೋದ್ಯಮವೆಂಬುದು ಕೇವಲ ಸುದ್ದಿಗಳ ಪ್ರಕಟಣೆಯಲ್ಲ, ಸಮಾಜದ ಆಗುಹೋಗುಗಳಿಗೆ ಸ್ಪಂದಿಸಿ ಜನರ ಧ್ವನಿಯಾಗುವ ಮಹತ್ವದ ಜವಾಬ್ದಾರಿ ಎಂಬುದನ್ನು ತಮ್ಮ ವೃತ್ತಿಜೀವನದ ಮೂಲಕ ಸಾಬೀತುಪಡಿಸಿರುವ ಹರೀಶ್ ರೈ ಅವರ ಸಾಧನೆಗೆ ಈ ಪ್ರಶಸ್ತಿ ಮತ್ತೊಂದು ಗೌರವದ ಗರಿಯಾಗಿದೆ. ಅವರ ಸುದೀರ್ಘ ಸೇವೆ, ವೃತ್ತಿಪರ ಮೌಲ್ಯಗಳು ಮತ್ತು ಪತ್ರಕರ್ತರ ಹಿತಾಸಕ್ತಿಗಾಗಿ ಸಲ್ಲಿಸಿರುವ ಕೊಡುಗೆಯನ್ನು ಗುರುತಿಸಿರುವುದು ಪತ್ರಿಕಾ ವಲಯಕ್ಕೆ ಹೆಮ್ಮೆಯ ಸಂಗತಿಯಾಗಿದೆ.

ಹರೀಶ್ ರೈ ಅವರ ಈ ಗೌರವವು ಅವರ ವೈಯಕ್ತಿಕ ಸಾಧನೆಯಷ್ಟೇ ಅಲ್ಲದೆ, ಸಮರ್ಪಣಾ ಮನೋಭಾವದಿಂದ ಪತ್ರಿಕಾ ರಂಗದಲ್ಲಿ ಸೇವೆ ಸಲ್ಲಿಸುತ್ತಿರುವ ಸಮಸ್ತ ಪತ್ರಕರ್ತರಿಗೂ ಸಂದ ಗೌರವವಾಗಿದೆ. ಅವರ ಸಾಧನೆಗೆ ಸಹೋದ್ಯೋಗಿಗಳು, ಸ್ನೇಹಿತರು ಹಾಗೂ ಹಿತೈಷಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಅಶೋಕ ನಗರ ಜ್ಞಾನ ದೇಗುಲಕ್ಕೆ ಹೊಸ ಕಳೆ - ನೂತನ ಶಾಖಾ ಗ್ರಂಥಾಲಯ ಲೋಕಾರ್ಪಣೆ



ಓದುವ ಹವ್ಯಾಸಕ್ಕೆ ಉತ್ತೇಜನ ನೀಡುವ ಮೂಲಕ ಜ್ಞಾನವಂತ ಸಮಾಜ ನಿರ್ಮಿಸುವ ನಿಟ್ಟಿನಲ್ಲಿ ಮಂಗಳೂರಿನ ಅಶೋಕ ನಗರದಲ್ಲಿ ನೂತನವಾಗಿ ನಿರ್ಮಿಸಲಾದ ಶಾಖಾ ಗ್ರಂಥಾಲಯದ ಕಟ್ಟಡವನ್ನು ಮಂಗಳೂರು ದಕ್ಷಿಣ ಕ್ಷೇತ್ರದ ಶಾಸಕರಾದ ವೇದವ್ಯಾಸ ಕಾಮತ್ ಅವರು ಉದ್ಘಾಟಿಸಿದರು. ನಗರ ಕೇಂದ್ರ ಗ್ರಂಥಾಲಯದ ಸದಸ್ಯ ಸುಬ್ರಹ್ಮಣ್ಯ ಶೆಣೈ ಅವರ ನಿರಂತರ ಪ್ರಯತ್ನದ ಫಲವಾಗಿ ಈ ಗ್ರಂಥಾಲಯಕ್ಕೆ ನೂತನ ಕಟ್ಟಡ ನಿರ್ಮಾಣಗೊಂಡಿದೆ. ಈ ಹಿಂದೆ ಸ್ಥಳಾವಕಾಶದ ಕೊರತೆಯಿಂದ ಓದುಗರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದರು. 2019ರಿಂದ ಸೂಕ್ತ ಕಟ್ಟಡಕ್ಕಾಗಿ ನಡೆಸಿದ ಪ್ರಯತ್ನ ಇದೀಗ ಫಲ ನೀಡಿದೆ ಎಂದು ಶಾಸಕ ವೇದವ್ಯಾಸ ಕಾಮತ್ ತಿಳಿಸಿದರು.

ಗ್ರಂಥಾಲಯದ ಕಟ್ಟಡ ನಿರ್ಮಾಣಕ್ಕೆ ತಮ್ಮ ಸ್ವಂತ ನಿಧಿಯಿಂದ 15 ಲಕ್ಷ ರೂ. ಹಾಗೂ ನಗರ ಗ್ರಂಥಾಲಯ ಪ್ರಾಧಿಕಾರದ ನಿಧಿಯಿಂದ 16 ಲಕ್ಷ ರೂ. ಅನುದಾನ ಒದಗಿಸಲಾಗಿದೆ. ಸಣ್ಣ ಕೊಠಡಿಯಲ್ಲೇ ಪ್ರತಿನಿತ್ಯ ಜ್ಞಾನಾರ್ಜನೆ ಮಾಡುತ್ತಿದ್ದ ಓದುಗರಿಗೆ ನೂತನ ಕಟ್ಟಡದಿಂದ ಹೆಚ್ಚಿನ ಅನುಕೂಲವಾಗಲಿದೆ ಎಂದರು. ಮುಂದಿನ ದಿನಗಳಲ್ಲಿ ಕಟ್ಟಡದ ಮೇಲ್ಭಾಗದಲ್ಲಿ ಮತ್ತೊಂದು ಕೊಠಡಿ ನಿರ್ಮಿಸಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವ ವಿದ್ಯಾರ್ಥಿಗಳಿಗಾಗಿ ಸುಸಜ್ಜಿತ ಅಧ್ಯಯನ ಕೇಂದ್ರ ಸ್ಥಾಪಿಸುವ ಉದ್ದೇಶವಿದೆ. ಈ ಕಾರ್ಯಕ್ಕೂ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಶಾಲೆಟ್ ಪಿಂಟೊ, ಜಯಲಕ್ಷ್ಮೀ, ಗಣೇಶ್ ಕುಲಾಲ್ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವಿಶ್ವನಾಥ ಸುವರ್ಣರಿಗೆ ಸನ್ಮಾನ



ಕರ್ನಾಟಕ ರಾಜ್ಯ ಸರ್ಕಾರದ ಪ್ರತಿಷ್ಠಿತ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ದಕ್ಷಿಣ ಕನ್ನಡ ಮೂಲದ ಹಿರಿಯ ಪತ್ರಿಕಾ ಛಾಯಾಗ್ರಾಹಕ ವಿಶ್ವನಾಥ ಸುವರ್ಣ ಅವರನ್ನು ಮಂಗಳೂರು ಪತ್ರಿಕಾ ಭವನದಲ್ಲಿ ಆತ್ಮೀಯವಾಗಿ ಅಭಿನಂದಿಸಿ ಗೌರವಿಸಲಾಯಿತು. ಮಂಗಳೂರು ಪತ್ರಿಕಾ ಭವನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಮಂಗಳೂರು ಪ್ರೆಸ್ ಕ್ಲಬ್ ಹಾಗೂ ಪತ್ರಿಕಾ ಭವನ ಟ್ರಸ್ಟ್ ವತಿಯಿಂದ ಈ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸನ್ಮಾನ ಸ್ವೀಕರಿಸಿ ಮಾತನಾಡಿದ ವಿಶ್ವನಾಥ ಸುವರ್ಣ ಅವರು, ಪತ್ರಿಕಾ ಛಾಯಾಗ್ರಾಹಕರಾಗಿ ಕಳೆದ 45 ವರ್ಷಗಳ ಸುದೀರ್ಘ ಪಯಣದಲ್ಲಿ ಕಂಡ ಸಿಹಿ–ಕಹಿ ಅನುಭವಗಳನ್ನು ಹಂಚಿಕೊಂಡರು. ತಮ್ಮ ವೃತ್ತಿಜೀವನದ ಹಾದಿಯಲ್ಲಿ ಬೆಂಬಲವಾಗಿ ನಿಂತ ಎಲ್ಲರನ್ನೂ ಸ್ಮರಿಸಿದ ಅವರು, ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಕೃತಜ್ಞತೆ ಸಲ್ಲಿಸಿದರು. ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್., ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ. ಹರೀಶ್ ರೈ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀನಿವಾಸ ನಾಯಕ್ ಇಂದಾಜೆ ಹಾಗೂ ಮಹಾರಾಷ್ಟ್ರ ಕನ್ನಡಿಗ ಪತ್ರಕರ್ತರ ಸಂಘದ ಅಧ್ಯಕ್ಷ ರೋನ್ಸ್ ಬಂಟ್ವಾಳ ಅವರು ವಿಶ್ವನಾಥ ಸುವರ್ಣ ಅವರನ್ನು ಅಭಿನಂದಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಘದ ಪೂರ್ವಾಧ್ಯಕ್ಷ ಹರ್ಷ, ಸಂಘದ ಕಾರ್ಯದರ್ಶಿ ಸತೀಶ್ ಇರಾ, ಕಾರ್ಯಕಾರಿ ಸಮಿತಿ ಸದಸ್ಯ ಸಂದೇಶ್ ಜಾರ, ಹರೀಶ್ ಮೋಟುಕಾನ ಮೊದಲಾದವರು ಉಪಸ್ಥಿತರಿದ್ದರು. ಜಿಲ್ಲಾ ಸಂಘದ ಉಪಾಧ್ಯಕ್ಷ ಆರಿಫ್ ಪಡುಬಿದ್ರೆ ಸ್ವಾಗತಿಸಿದರು.

ಡಾ. ಮೋಹನ ಆಳ್ವ ಅವರ ಅಮೃತ ಮಹೋತ್ಸವಕ್ಕೆ - 15 ಕೋಟಿಗಳ ಜನಸೇವಾ ಸಂಕಲ್ಪ

10 ಸಾವಿರ ಮಂದಿಗೆ ಉಚಿತ ಡಯಾಲಿಸಿಸ್ - ಫೆಬ್ರವರಿ 13ರಂದು ಸಂಭ್ರಮಾಚರಣೆ



ಶಿಕ್ಷಣ, ಆರೋಗ್ಯ, ಕಲೆ, ಸಂಸ್ಕೃತಿ ಹಾಗೂ ಸಮಾಜಸೇವೆಯ ಮೂಲಕ ಸಾವಿರಾರು ಜನರ ಬದುಕಿಗೆ ಬೆಳಕಾಗಿರುವ ಡಾ. ಎಂ. ಮೋಹನ ಆಳ್ವರ 75ನೇ ವರ್ಷದ ಅಮೃತ ಮಹೋತ್ಸವವನ್ನು ಸಮಾಜಮುಖಿ ಸೇವಾ ಕಾರ್ಯಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ ನಡೆದಿದೆ. ಸುಮಾರು 15 ಕೋಟಿ ರೂಪಾಯಿ ವೆಚ್ಚದಲ್ಲಿ ಕ್ಯಾನ್ಸರ್ ಚಿಕಿತ್ಸಾ ಸೌಲಭ್ಯಗಳ ಅಭಿವೃದ್ಧಿ, 10 ಸಾವಿರ ಮಂದಿಗೆ ಉಚಿತ ಡಯಾಲಿಸಿಸ್ ಹಾಗೂ ವೃದ್ಧರ ಘನತೆಯ ಬದುಕಿಗೆ ನೆರವಾಗುವ 'ಹ್ಯಾಪಿ ಡೇಸ್' ಯೋಜನೆಗಳನ್ನು ರೂಪಿಸುವ ಚಿಂತನೆ ಇದೆ ಎಂದು ಉದ್ಯಮಿ ಶಶಿಧರ ಶೆಟ್ಟಿ ಬರೋಡ ತಿಳಿಸಿದರು. ಡಾ. ಎಂ. ಮೋಹನ ಆಳ್ವ ಅಭಿನಂದನಾ ಸಮಿತಿ–2027ರ ಆಶ್ರಯದಲ್ಲಿ ಪಿಲಿಕುಳದ ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಭವನದಲ್ಲಿ ನಡೆದ ಪೂರ್ವಭಾವಿ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು. ಆಳ್ವರಿಂದ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಗುರುದಕ್ಷಿಣೆಯ ರೂಪದಲ್ಲಿ ನಿಧಿ ಸಂಗ್ರಹಿಸಿ, ಅದನ್ನು ಆರೋಗ್ಯ ಸೇವಾ ಯೋಜನೆಗಳಿಗೆ ವಿನಿಯೋಗಿಸುವ ಉದ್ದೇಶವಿದೆ ಎಂದರು. ತಮ್ಮ ಅಮೃತ ಮಹೋತ್ಸವ ಕೇವಲ ವೈಭವದ ಆಚರಣೆಯಾಗದೆ, ಸಮಾಜಕ್ಕೆ ಉಪಯುಕ್ತವಾದ ಸೇವಾ ಕಾರ್ಯಗಳಿಗೆ ವೇದಿಕೆಯಾಗ

'ಬೋಲಾಸ್' ಮೇಲೆ ದಾಳಿ - ಎಣ್ಣೆ ಜಪ್ತಿ

ಕಡಿಮೆ ಬೆಲೆಯ ಕಚ್ಚಾ ಕಡಲೆಕಾಯಿ ಎಣ್ಣೆಗೆ 'ಕೋಲ್ಡ್ ಪ್ರೆಸ್ಡ್' ಎಂಬ ಆಕರ್ಷಕ ಹೆಸರಿನ ಲೇಬಲ್ ಅಂಟಿಸಿ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದ ಪ್ರಕರಣವೊಂದು ಬೈಕಂಪಾಡಿ ಕೈಗಾರಿಕಾ ಪ್ರದೇಶದ ಬೋಲಾಸ್ ಆಗ್ರೋ ಪ್ರೈವೇಟ್ ಲಿಮಿಟೆಡ್ ಘಟಕದಲ್ಲಿ ಬೆಳಕಿಗೆ ಬಂದಿದೆ. ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಅಧಿಕಾರಿಗಳು ಘಟಕದ ಮೇಲೆ ದಾಳಿ ನಡೆಸಿ, ಒಟ್ಟು 1,240 ಕೆ.ಜಿ. ಅಡುಗೆ ಎಣ್ಣೆಯನ್ನು ವಶಕ್ಕೆ ಪಡೆದಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಿಂದ ಕಚ್ಚಾ ಕಡಲೆಕಾಯಿ ಎಣ್ಣೆಯನ್ನು ತರಿಸಿಕೊಂಡು, ಅದನ್ನು 'ಕೋಲ್ಡ್ ಪ್ರೆಸ್ಡ್ ಕಡಲೆಕಾಯಿ ಎಣ್ಣೆ' ಎಂದು ಮರುಪ್ಯಾಕಿಂಗ್ ಮಾಡಿ ಮಾರಾಟ ಮಾಡಲಾಗುತ್ತಿತ್ತು ಎಂದು ತಿಳಿದುಬಂದಿದೆ. ಈ ಸಂಬಂಧ ಆಹಾರ ಸುರಕ್ಷತಾ ಅಧಿಕಾರಿಗಳು ಘಟಕಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ, ಲೇಬಲಿಂಗ್ ಮತ್ತು ಬ್ರ್ಯಾಂಡಿಂಗ್ ಪ್ರಕ್ರಿಯೆಯಲ್ಲಿ ಗಂಭೀರ ಲೋಪಗಳು ಕಂಡುಬಂದಿವೆ. ದಾಳಿಯ ವೇಳೆ ಪ್ರತಿ ಬಾಕ್ಸ್‌ಗೆ 10 ಕೆ.ಜಿ.ಯಂತೆ 11 ಕಡಲೆಕಾಯಿ ಎಣ್ಣೆ ಬಾಕ್ಸ್‌ಗಳು, ಪ್ರತಿ ಕ್ಯಾನ್‌ಗೆ 35 ಲೀಟರ್‌ನಂತೆ 30 ಕಡಲೆಕಾಯಿ ಎಣ್ಣೆ ಕ್ಯಾನ್‌ಗಳು ಹಾಗೂ ಪ್ರತಿ ಬಾಕ್ಸ್‌ಗೆ 20 ಕೆ.ಜಿ.ಯಂತೆ ಸಾಲ್ವು ತೆಂಗಿನ ಎಣ್ಣೆ ಬಾಕ್ಸ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಒಟ್ಟು 1,240 ಕೆ.ಜಿ. ತೂಕದ ಅಡುಗೆ ಎಣ್ಣೆಯನ್ನು ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಆಹಾರ ಉತ್ಪನ್ನಗಳ ಲೇಬಲ್ ಮತ್ತು ಗುಣಮಟ್ಟದ ಬಗ್ಗೆ ಗ್ರಾಹಕರು ನಂಬಿಕೆ ಇಟ್ಟು ಖರೀದಿಸುತ್ತಾರೆ. ಇಂತಹ ಸಂದರ್ಭದಲ್ಲಿ ಉತ್ಪನ್ನದ ನೈಜ ಸ್ವರೂಪಕ್ಕೆ ವಿರುದ್ಧವಾಗಿ ತಪ್ಪು ಮಾಹಿತಿ ನೀಡುವ ಮೂಲಕ ಗ್ರಾಹಕರನ್ನು ದಾರಿತಪ್ಪಿಸುವುದು ಗಂಭೀರ ವಿಚಾರವಾಗಿದೆ.

ಲಾರಿ-ಕಂಟೇನರ್ ಡಿಕ್ಕಿ - ನಾಲ್ವರಿಗೆ ಗಾಯ

ಅಮೃತೇಶ್ವರಿ ಜಂಕ್ಷನ್‌ನಲ್ಲಿ ಮೀನು ಸಾಗಣೆ ಲಾರಿ ಮತ್ತು ಕಂಟೇನರ್ ಲಾರಿ ನಡುವೆ ಡಿಕ್ಕಿ ಸಂಭವಿಸಿ, ಎರಡೂ ವಾಹನಗಳು ತೀವ್ರವಾಗಿ ಜಖಂಗೊಂಡಿವೆ. ಅಪಘಾತದಲ್ಲಿ ಎರಡೂ ವಾಹನಗಳ ಚಾಲಕರು ಹಾಗೂ ಕ್ಲೀನರ್‌ಗಳು ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ. ವರದಿಗಳ ಪ್ರಕಾರ, ಕುಂದಾಪುರ – ಕೋಟ ಮಾರ್ಗವಾಗಿ ಬರುತ್ತಿದ್ದ ಮೀನು ಸಾಗಣೆ ಲಾರಿ ಜಂಕ್ಷನ್‌ನಲ್ಲಿ ಪೂರ್ವ ದಿಕ್ಕಿಗೆ ಯು-ಟರ್ನ್ ತೆಗೆದುಕೊಳ್ಳಲು ಮುಂದಾಗಿತ್ತು.

ಈ ವೇಳೆ ಉಡುಪಿಯಿಂದ ಕುಂದಾಪುರದತ್ತ ಸಾಗುತ್ತಿದ್ದ ಕಂಟೇನರ್ ಲಾರಿ ಅದಕ್ಕೆ ಡಿಕ್ಕಿ ಹೊಡೆದಿದೆ. ಮಾಹಿತಿ ತಿಳಿದ ಕೋಟ ಪೊಲೀಸರು ಸ್ಥಳಕ್ಕೆ ಧಾವಿಸಿ, ಹಾನಿಗೊಳಗಾದ ವಾಹನಗಳನ್ನು ರಸ್ತೆಯಿಂದ ತೆರವುಗೊಳಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಿದರು.

ದನ ಕಳ್ಳತನಕ್ಕೆ ಯತ್ನ - ಸಿಸಿಟಿವಿಯಲ್ಲಿ ಸೆರೆ

ಉಡುಪಿ ಪರ್ಕಳದ ಮಹಾಲಿಂಗೇಶ್ವರ ದೇವಸ್ಥಾನದ ಬಳಿ ವಿಶ್ರಾಂತಿ ಪಡೆಯುತ್ತಿದ್ದ ದನಗಳನ್ನು ಕದಿಯಲು ಇಬ್ಬರು ಅಪರಿಚಿತರು ಯತ್ನಿಸಿದ ಘಟನೆ ನಡೆದಿದೆ. ಕಳ್ಳತನದ ಯತ್ನದ ದೃಶ್ಯ ದೇವಸ್ಥಾನದ ಸಮೀಪದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ವರದಿಗಳ ಪ್ರಕಾರ, ಕಾರಿನಲ್ಲಿ ಬಂದ ಇಬ್ಬರು ಅಪರಿಚಿತರು ದೇವಸ್ಥಾನದ ಬಳಿ ದನಗಳು ಮಲಗಿದ್ದ ಸ್ಥಳಕ್ಕೆ ತೆರಳಿದ್ದಾರೆ. ಕಾರಿನಿಂದ ಇಳಿದು ದನಗಳ ಸಮೀಪಕ್ಕೆ ಬರುತ್ತಿದ್ದಂತೆ, ಹೆದರಿದ ದನಗಳ ಹಿಂಡು ಅಲ್ಲಿಂದ ಓಡಿಹೋಗಿದೆ. ಇದರಿಂದ ದನಗಳನ್ನು ಹಿಡಿಯಲು ಬಂದಿದ್ದವರ ಯತ್ನ ವಿಫಲವಾಗಿದೆ. ದನಗಳು ಓಡಿಹೋದ ಬಳಿಕವೂ ಆ ಇಬ್ಬರು ಕೆಲಕಾಲ ಸ್ಥಳದಲ್ಲೇ ಕಾದಿದ್ದು, ಕೊನೆಗೆ ಕಾರಿನಲ್ಲಿ ಪರಾರಿಯಾಗಿದ್ದಾರೆ ಎನ್ನಲಾಗಿದೆ. ಈ ಘಟನೆ ಸಿಸಿಟಿವಿ ದೃಶ್ಯಗಳಲ್ಲಿ ದಾಖಲಾಗಿದ್ದು, ಮುಂಜಾನೆ ನಡೆದ ಈ ಘಟನೆಯಿಂದ ಸ್ಥಳೀಯರಲ್ಲಿ ಆತಂಕ ಉಂಟಾಗಿದೆ. ದನ ಕಳ್ಳತನಕ್ಕೆ ಯತ್ನಿಸಿದವರನ್ನು ಗುರುತಿಸಿ ಪತ್ತೆಹಚ್ಚುವಂತೆ ಸ್ಥಳೀಯರು ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ನೆಕ್ಕರೆಯಲ್ಲಿ ಕಾರು-ಜೀತಾ ಡಿಕ್ಕಿ: ಓರ್ವ ಸಾವು, ಮೂವರಿಗೆ ಗಾಯ

ಕಾರು ಮತ್ತು ಮಹೇಂದ್ರ ಜೀತಾ ವಾಹನದ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಓರ್ವ ಮೃತಪಟ್ಟಿದ್ದು, ಮೂವರು ಗಾಯಗೊಂಡ ಘಟನೆ ಕಡಬ ತಾಲೂಕಿನ ಅಲಂಕಾರು ಗ್ರಾಮದ ನೆಕ್ಕರೆ ಎಂಬಲ್ಲಿ ನಡೆದಿದೆ. ಪತ್ರಿಕಾ ಪ್ರಕಟಣೆಯ ಪ್ರಕಾರ, ಕಡಬ ಕಡೆಯಿಂದ ಉಪ್ಪಿನಂಗಡಿ ಕಡೆಗೆ KA-21-MA-8490 ನೋಂದಣಿಯ ಕಾರನ್ನು ಅದರ ಚಾಲಕ ಅಜಾಗರೂಕತೆ ಹಾಗೂ ನಿರ್ಲಕ್ಷ್ಯದಿಂದ ಚಲಾಯಿಸಿಕೊಂಡು ಹೋಗುತ್ತಿದ್ದಾಗ, ಎದುರಿನಿಂದ ಅಂದರೆ ಉಪ್ಪಿನಂಗಡಿ ಕಡೆಯಿಂದ ಕಡಬ ಕಡೆಗೆ ಹಣ್ಣುಹಂಪಲು ತುಂಬಿಸಿಕೊಂಡು ಬರುತ್ತಿದ್ದ KA-21-B-2940 ನೋಂದಣಿಯ ಮಹೇಂದ್ರ ಜೀತಾ ವಾಹನಕ್ಕೆ ಡಿಕ್ಕಿಯಾಗಿದೆ. ಅಪಘಾತದ ತೀವ್ರತೆಗೆ ಜೀತಾ ವಾಹನದ ಚಾಲಕ ಖಲೀಲ್, ಸಹ ಪ್ರಯಾಣಿಕ ತಮೀಮ್ ಹಾಗೂ ಕಾರಿನ ಚಾಲಕ ಗಾಯಗೊಂಡಿದ್ದಾರೆ. ಸ್ಥಳೀಯರು ತಕ್ಷಣ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಿದ್ದು, ಆಸ್ಪತ್ರೆಗೆ ಕರೆತಂದ ವೇಳೆ ಜೀತಾ ವಾಹನದ ಸಹ ಪ್ರಯಾಣಿಕ ತಮೀಮ್ ಮೃತಪಟ್ಟಿರುವುದಾಗಿ ತಿಳಿದುಬಂದಿದೆ.

ಈ ಸಂಬಂಧ ಕಡಬ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 138/2026ರಂತೆ ಭಾರತೀಯ ನ್ಯಾಯ ಸಂಹಿತೆ (BNS) 2023ರ ಕಲಂ 281, 125(a) ಮತ್ತು 106ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಸೂರಿಕುಮೇರುವಿನಲ್ಲಿ ಸರಗಳ್ಳರ ಕೈಚಳಕ - ನಕಲಿ ಸರ ಕಳವು

ಹಾಡಹಗಲೇ ಜನನಿಬಿಡ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವೃದ್ಧೆಯೊಬ್ಬರ ಸರವನ್ನು ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಕಸಿದು ಪರಾರಿಯಾದ ಘಟನೆ ಸೂರಿಕುಮೇರು ಸಮೀಪದ ಕಾಯರಡ್ಕ ರಸ್ತೆಯಲ್ಲಿ ನಡೆದಿದೆ. ಈ ಘಟನೆಯಿಂದ ಸ್ಥಳೀಯ ನಿವಾಸಿಗಳು ಹಾಗೂ ಸಾರ್ವಜನಿಕರಲ್ಲಿ ಆತಂಕ ಮೂಡಿದೆ. ಬರಿಮಾರು ರಸ್ತೆಯ ಕಡೆಯಿಂದ ಬೈಕ್‌ನಲ್ಲಿ ಬಂದ ಇಬ್ಬರು ಯುವಕರು ಮುಖಕ್ಕೆ ಮಾಸ್ಕ್ ಧರಿಸಿದ್ದರು ಎನ್ನಲಾಗಿದೆ. ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವೃದ್ಧೆಯ ಬಳಿ ದಾರಿ ಕೇಳುವ ನೆಪದಲ್ಲಿ ಬಂದ ದುಷ್ಕರ್ಮಿಗಳು ವಿಕಾಏಕಿ ಆಕೆಯ ಕೊರಳಲ್ಲಿದ್ದ ಸರವನ್ನು ಕಸಿದುಕೊಂಡು ಅದೇ ರಸ್ತೆಯ ಮೂಲಕ ಪರಾರಿಯಾಗಿದ್ದಾರೆ. ಕೃತ್ಯ ಎಸಗಿದವರು ಬರಿಮಾರು ರಸ್ತೆ ಮೂಲಕ ಬಿ.ಸಿ.ರೋಡ್, ಮಂಗಳೂರು ಹಾಗೂ ಉಪ್ಪಿನಂಗಡಿ ಕಡೆಗೆ ಸಂಪರ್ಕ ಕಲ್ಪಿಸುವ ಮಾರ್ಗದಲ್ಲಿ ಪರಾರಿಯಾಗಿರುವ ಸಾಧ್ಯತೆ ಇದೆ. ಸಮೀಪದ ಹೊಸ ಕಟ್ಟಡವೊಂದರಲ್ಲಿ ಅಳವಡಿಸಲಾಗಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಈ ಘಟನೆಯ ದೃಶ್ಯಗಳು ದಾಖಲಾಗಿವೆ ಎನ್ನಲಾಗಿದೆ. ಇದರಿಂದ ದುಷ್ಕರ್ಮಿಗಳನ್ನು ಪತ್ತೆಹಚ್ಚಲು ಪೊಲೀಸರಿಗೆ ಸಹಕಾರಿಯಾಗುವ ನಿರೀಕ್ಷೆಯಿದೆ.

ಚಿನ್ನವೆಂದು ಭಾವಿಸಿ ಸರ ಕದ್ದ ಕಳ್ಳರು!: ಈ ಘಟನೆಯಲ್ಲಿ ಮತ್ತೊಂದು ಕುತೂಹಲಕಾರಿ ಸಂಗತಿಯೆಂದರೆ, ದುಷ್ಕರ್ಮಿಗಳು ಕಸಿದುಕೊಂಡ ಸರ ನಿಜವಾದ ಚಿನ್ನದ್ದಾಗಿರದೆ ನಕಲಿ ಸರವಾಗಿತ್ತು ಎನ್ನಲಾಗಿದೆ. ಚಿನ್ನವೆಂದು ಭಾವಿಸಿ ಸರ ಕಸಿದುಕೊಂಡ ಕಳ್ಳರು ಕೊನೆಗೆ ತಾವೇ ಮೋಸ ಹೋದಂತಾಗಿದೆ.

ಮಹಿಳೆಯರ ಸುರಕ್ಷತೆ ಬಗ್ಗೆ ಆತಂಕ: ಇತ್ತೀಚಿನ ದಿನಗಳಲ್ಲಿ ಹಾಡಹಗಲೇ ನಡೆಯುತ್ತಿರುವ ಸರಗಳ್ಳತನದಂತಹ ಘಟನೆಗಳು ಸಾರ್ವಜನಿಕರಲ್ಲಿ, ವಿಶೇಷವಾಗಿ ವೃದ್ಧ ಮಹಿಳೆಯರಲ್ಲಿ ಆತಂಕ ಮೂಡಿಸುತ್ತಿವೆ. ಒಂಟಿಯಾಗಿ ಸಂಚರಿಸುವ ಮಹಿಳೆಯರು ಹೆಚ್ಚಿನ ಎಚ್ಚರಿಕೆ ವಹಿಸುವ ಅಗತ್ಯವಿದೆ. ಘಟನೆಯ ಕುರಿತು ಪೊಲೀಸರು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿ ದುಷ್ಕರ್ಮಿಗಳನ್ನು ಪತ್ತೆಹಚ್ಚಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಭೀಕರ ಅಪಘಾತ - ಓರ್ವ ಸಾವು

ಹಣ್ಣು ಸಾಗಿಸುತ್ತಿದ್ದ ಪಿಕಪ್ ವಾಹನ ಮತ್ತು ಕಾರಿನ ನಡುವೆ ಮುಖಾಮುಖಿ ಡಿಕ್ಕಿಯಾಗಿ ಓರ್ವ ಮೃತಪಟ್ಟಿದ್ದು, ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡ ಘಟನೆ ಕಡಬ ತಾಲೂಕಿನ ಅಲಂಕಾರು ಸಮೀಪದ ನೆಕ್ಕರೆ ಎಂಬಲ್ಲಿ ನಡೆದಿದೆ. ಮಂಗಳೂರಿನಿಂದ ಕಡಬದ ಕಲಾರಕ್ಕೆ ಹಣ್ಣುಗಳನ್ನು ಸಾಗಿಸುತ್ತಿದ್ದ ಪಿಕಪ್ ವಾಹನವು ಎದುರಿನಿಂದ ಬರುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ಅಪಘಾತದ ತೀವ್ರತೆಗೆ ಪಿಕಪ್ ವಾಹನದಲ್ಲಿದ್ದ ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದರು. ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುವ ವೇಳೆ ಅವರಲ್ಲಿ ಓರ್ವ ದಾರಿಮಧ್ಯೆಯೇ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಮೃತರು ಹಾಗೂ ಗಾಯಗೊಂಡವರ ಗುರುತು ಇನ್ನೂ ಪತ್ತೆಯಾಗಿಲ್ಲ. ಘಟನಾ ಸ್ಥಳಕ್ಕೆ ಕಡಬ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬೆಳ್ಮಣ್‌ನಲ್ಲಿ ಅಪಘಾತ - ಯುವಕ ಸಾವು

ಕಾರ್ಕಳದ ಬೆಳ್ಮಣ್‌ನಲ್ಲಿ ಟಿಪ್ಪರ್ ಲಾರಿಗೆ ಬೈಕ್ ಡಿಕ್ಕಿಯಾಗಿ 19 ವರ್ಷದ ಯುವಕನೊಬ್ಬ ಮೃತಪಟ್ಟ ಘಟನೆ ನಡೆದಿದೆ. ಮೃತನನ್ನು ಪಿಲಾರು ಗ್ರಾಮದ ಕುಂಜಿಗುಡ್ಡೆ ನಿವಾಸಿ ತ್ರಿಶಾಂತ್ ಅಲಿಯಾಸ್ ಪುನೀತ್ ಎಂದು ಗುರುತಿಸಲಾಗಿದೆ. ಮೂಲಗಳ ಪ್ರಕಾರ, ಪುನೀತ್ ಬೆಳ್ಮಣ್‌ನಿಂದ ಪಿಲಾರು ಕಡೆಗೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಬೆಳ್ಮಣ್ ಸೊಸೈಟಿ ಮುಂಭಾಗದಲ್ಲಿ ತಿರುವು ಪಡೆಯಲು ರಸ್ತೆ ಬದಿಯಲ್ಲಿ ನಿಂತಿದ್ದ ಟಿಪ್ಪರ್ ಲಾರಿಯ ಮುಂಭಾಗಕ್ಕೆ ಡಿಕ್ಕಿ ಹೊಡೆದಿದ್ದಾರೆ. ಡಿಕ್ಕಿಯ ರಭಸಕ್ಕೆ ಬೈಕ್‌ನಿಂದ ಎಸೆಯಲ್ಪಟ್ಟ ಪುನೀತ್ ಅವರ ತಲೆ ಟಿಪ್ಪರ್‌ನ ಮುಂಭಾಗಕ್ಕೆ ಬಡಿದು ಗಂಭೀರ ಗಾಯಗೊಂಡಿದ್ದಾರೆ. ಸ್ಥಳೀಯರು ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದೊಯ್ದರಾದರೂ, ದಾರಿಮಧ್ಯೆಯೇ ಅವರು ಮೃತಪಟ್ಟಿದ್ದಾರೆ. ಪುನೀತ್ ಪ್ರತಿಭಾವಂತ ಯುವಕನಾಗಿದ್ದು, ಸ್ಥಳೀಯವಾಗಿ ಡಿಜೆ ಕಲಾವಿದನಾಗಿ ಪರಿಚಿತರಾಗಿದ್ದರು. ಯುವಕನ ಅಕಾಲಿಕ ನಿಧನದಿಂದ ಕುಟುಂಬಸ್ಥರು ಹಾಗೂ ಸ್ನೇಹಿತರಲ್ಲಿ ಶೋಕ ಆವರಿಸಿದೆ. ಈ ಕುರಿತು ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವಕ ಹಿಟ್ ಆ್ಯಂಡ್ ರನ್‌ಗೆ ಬಲಿ

ಚಿಕ್ಕಮ್ಮನ ಮಗಳ ಮದುವೆ ಸಮಾರಂಭದಲ್ಲಿ ಪಾಲ್ಗೊಳ್ಳಲು ಬೈಕ್‌ನಲ್ಲಿ ತೆರಳುತ್ತಿದ್ದ ಯುವಕನೊಬ್ಬ ಹಿಟ್ ಆ್ಯಂಡ್ ರನ್ ಅಪಘಾತದಲ್ಲಿ ಮೃತಪಟ್ಟ ದಾರುಣ ಘಟನೆ ನೆಲಮಂಗಲ ತಾಲ್ಲೂಕಿನ ತ್ಯಾಮಗೊಂಡ್ಲು ಸಮೀಪ ತಡರಾತ್ರಿ ನಡೆದಿದೆ. ಮೃತ ಯುವಕನನ್ನು 25 ವರ್ಷ ಪ್ರಾಯದ ಕೃಷ್ಣ ಎಂದು ಗುರುತಿಸಲಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕಡೂರಿನಲ್ಲಿ ವಾಸವಾಗಿದ್ದ ಕೃಷ್ಣ, ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ನಡೆಯಬೇಕಿದ್ದ ಚಿಕ್ಕಮ್ಮನ ಮಗಳ ಮದುವೆಗೆ ಬೈಕ್‌ನಲ್ಲಿ ತೆರಳುತ್ತಿದ್ದರು. ಈ ಸಂದರ್ಭದಲ್ಲಿ ತ್ಯಾಮಗೊಂಡ್ಲು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಪಘಾತ ಸಂಭವಿಸಿದೆ. ಇತ್ತೀಚೆಗಷ್ಟೇ ಕಾವೇರಿ ಎಂಬ ಯುವತಿಯನ್ನು ವಿವಾಹವಾಗಿದ್ದ ಕೃಷ್ಣ ಅವರ ಅಕಾಲಿಕ ಸಾವಿನಿಂದ ಕುಟುಂಬದಲ್ಲಿ ಶೋಕ ಆವರಿಸಿದೆ. ಘಟನಾ ಸ್ಥಳಕ್ಕೆ ತ್ಯಾಮಗೊಂಡ್ಲು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ನೆಲಮಂಗಲದ ಶವಾಗಾರಕ್ಕೆ ರವಾನಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಮೊಟ್ಟೆ ಸಾಗಾಟ ವಾಹನದಲ್ಲಿ ಜಾನುವಾರು ಪತ್ತೆ

ಮೊಟ್ಟೆ ಸಾಗಣೆಗಾಗಿ ಬಳಸುವ ವಾಹನದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 16 ಜಾನುವಾರುಗಳನ್ನು ಕಂಕನಾಡಿ ಪೊಲೀಸರು ರಕ್ಷಿಸಿದ್ದು, ಇಬ್ಬರನ್ನು ಬಂಧಿಸಿದ್ದಾರೆ. ನಗರದ ಪಂಪ್‌ವೆಲ್ ಸಮೀಪದ ಉಜ್ಜೋಡಿ ಬಳಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಸೋಮವಾರ ಈ ಘಟನೆ ನಡೆದಿದೆ. 'ಸ್ಟಾರ್ ಎಗ್' ಎಂದು ಬರೆದಿರುವ ಮೊಟ್ಟೆ ಸಾಗಣೆ ವಾಹನದಲ್ಲಿ ಜಾನುವಾರುಗಳನ್ನು ಅಕ್ರಮವಾಗಿ ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಪೊಲೀಸರಿಗೆ ಲಭಿಸಿತ್ತು. ಅದರಂತೆ ವಾಹನವನ್ನು ತಡೆದು ಪರಿಶೀಲಿಸಿದಾಗ 16 ಜಾನುವಾರುಗಳು ಪತ್ತೆಯಾಗಿವೆ. ಈ ಸಂಬಂಧ ವಾಹನ ಚಾಲಕ, ಮೈಸೂರು ಮೂಲದ 52 ವರ್ಷ ಪ್ರಾಯದ ಮೊಹಮ್ಮದ್ ರಫೀಕ್ ಮತ್ತು ರೆಹಮಾನ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಬೆಳಗಾವಿ ಜಿಲ್ಲೆಯ ಯಮಕನಮರಡಿಯಿಂದ ಜಾನುವಾರುಗಳನ್ನು ಕೇರಳದ ಕಾಸರಗೋಡಿಗೆ ಮಾಂಸಕ್ಕಾಗಿ ಸಾಗಿಸಲಾಗುತ್ತಿತ್ತು ಎಂದು ತಿಳಿದುಬಂದಿದೆ. ವಾಹನದ ಹಿಂಭಾಗದಲ್ಲಿ ಮೊಟ್ಟೆಯ ಟ್ರೇಗಳನ್ನು ಜೋಡಿಸಲಾಗಿದ್ದು, ವಾಹನದ ಒಳಭಾಗದಲ್ಲಿ 16 ಜಾನುವಾರುಗಳನ್ನು ಅಮಾನವೀಯ ರೀತಿಯಲ್ಲಿ ತುಂಬಿಸಲಾಗಿತ್ತು. ರಕ್ಷಿಸಲಾದ ಜಾನುವಾರುಗಳನ್ನು ಫಜೀರ್‌ನಲ್ಲಿರುವ ಗೋಶಾಲೆಗೆ ಸಾಗಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕನ ಮೇಲೆ ಹಲ್ಲೆ ಆರೋಪ - ಪ್ರಕರಣ ದಾಖಲು

ಮನೆಗೆ ತೆರಳುತ್ತಿದ್ದ ಬಾಲಕನನ್ನು ರಸ್ತೆಬದಿಯಲ್ಲಿ ಅಪಾಚ್ಯವಾಗಿ ನಿಂದಿಸಿ, ಬಳಿಕ ಆತನ ಮನೆಯ ಅಂಗಳಕ್ಕೆ ಬಂದು ಹಲ್ಲೆ ನಡೆಸಿದ ಆರೋಪದ ಮೇಲೆ ಒಂಬತ್ತು ಮಂದಿಯ ವಿರುದ್ಧ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 2026ರ ಅಕ್ಟೋಬರ್ 5ರಂದು ರಾತ್ರಿ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ನಿವಾಸಿಯಾದ ಬಾಲಕ ಮನೆಗೆ ನಡೆದುಕೊಂಡು ಹೋಗುತ್ತಿದ್ದಾಗ, ಆತನ ಪರಿಚಯದ ಸುಧಾಕರ, ಪೇರಿಗೇರಿ ಚಂದ್ರ ಮತ್ತು ಹರೀಶ್ ಎಂಬವರು ರಸ್ತೆಬದಿಯಲ್ಲಿ ನಿಂತು ಅವಾಚ್ಯವಾಗಿ ಬೈದಿದ್ದಾರೆ ಎನ್ನಲಾಗಿದೆ. ಸ್ವಲ್ಪ ಸಮಯದ ಬಳಿಕ ಸುಧಾಕರ, ಹರೀಶ್, ಪೇರಿಗೇರಿ ಚಂದ್ರ, ವಸಂತಿ, ಮೋಹನ್, ಗೋಪಚಂದ್ರ, ಟಿ.ಸಿ. ಚಂದ್ರ, ಪ್ರಮೀಳ ಮತ್ತು ಸುಮ ಎಂಬವರು ಬಾಲಕನ ಮನೆಯ ಅಂಗಳಕ್ಕೆ ಬಂದು ಆತನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಜಗಳ ಬಿಡಿಸಲು ಬಂದ ಬಾಲಕನ ತಾಯಿ ಹಾಗೂ ತಂಗಿಯನ್ನೂ ದೂಡಿ ಹಾಕಿದ್ದಾರೆ ಎನ್ನಲಾಗಿದೆ. ಹಲ್ಲೆಯಿಂದ ಗಾಯಗೊಂಡ ಬಾಲಕ ಪುತ್ತೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾನೆ. ಈ ಸಂಬಂಧ ನೀಡಲಾದ ದೂರಿನ ಮೇರೆಗೆ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ನವೆಂಬರ್ 11, 2026ರಂದು ಅಪರಾಧ ಸಂಖ್ಯೆ 140/2026ರಡಿ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಕಲಂಗಳು ಹಾಗೂ ಬಾಲನ್ಯಾಯ ಕಾಯ್ದೆಯ ಕಲಂ 75ರಂತೆ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

10 ವರ್ಷ ತಲೆಮರೆಸಿಕೊಂಡಿದ್ದ ಆರೋಪಿ ಬಂಧನ

ಸುಲಿಗೆ ಪ್ರಕರಣವೊಂದರಲ್ಲಿ ಸುಮಾರು 10 ವರ್ಷಗಳಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸ

ಮರುಬಳಕೆಯ ಅಡುಗೆ ಎಣ್ಣೆ ಆರೋಗ್ಯಕ್ಕೆ ಅಪಾಯ!



ಪೂರಿ, ಬಜ್ಜಿ, ಸಮೋಸಾ, ಪಕೋಡಾ ಕರಿದ ಎಣ್ಣೆಯನ್ನೇ ಮತ್ತೆ ಅಡುಗೆಗೆ ಬಳಸುತ್ತಿದ್ದೀರಾ? ಹಣ ಉಳಿಸುವ ಉದ್ದೇಶದಿಂದ ಮಾಡುವ ಈ ಸಣ್ಣ ತಪ್ಪು ನಿಮ್ಮ ಆರೋಗ್ಯದ ಮೇಲೆ ದೊಡ್ಡ ಪರಿಣಾಮ ಬೀರಬಹುದು. ಎಣ್ಣೆಯನ್ನು ಪದೇಪದೇ ಹೆಚ್ಚಿನ ತಾಪಮಾನದಲ್ಲಿ ಕಾಯಿಸುವುದರಿಂದ ಹಾನಿಕಾರಕ ರಾಸಾಯನಿಕ ಸಂಯುಕ್ತಗಳು ಉತ್ಪತ್ತಿಯಾಗುತ್ತವೆ. ಇವು ದೇಹದ ಜೀವಕೋಶಗಳಿಗೆ ಹಾನಿ ಮಾಡುವುದರ ಜತೆಗೆ ಹೃದಯದ ಆರೋಗ್ಯ ಹಾಗೂ ಇತರ ಅಂಗಗಳ ಮೇಲೂ ದುಷ್ಪರಿಣಾಮ ಬೀರಬಹುದು. ಹಾಗಾದರೆ ಬಳಸಿದ ಅಡುಗೆ ಎಣ್ಣೆಯನ್ನು ಮತ್ತೆ ಬಳಸುವುದು ಎಷ್ಟು ಸುರಕ್ಷಿತ? ಪ್ರತಿಯೊಂದು ಮನೆಯಲ್ಲೂ ತಿಳಿದಿರಬೇಕಾದ ಆರೋಗ್ಯ ಮಾಹಿತಿ ಇಲ್ಲಿದೆ. ಇಂದಿನ ದಿನಗಳಲ್ಲಿ ಅಡುಗೆ ಮನೆಯ ಖರ್ಚು ಕಡಿಮೆ ಮಾಡುವ ಉದ್ದೇಶದಿಂದ ಅನೇಕರು ಬಳಸಿದ ಅಡುಗೆ ಎಣ್ಣೆಯನ್ನು ಮತ್ತೆ ಮತ್ತೆ ಉಪಯೋಗಿಸುವ ಅಭ್ಯಾಸ ಬೆಳೆಸಿಕೊಂಡಿದ್ದಾರೆ. ವಿಶೇಷವಾಗಿ ಪೂರಿ, ಬಜ್ಜಿ, ಬೋಂಡಾ, ಸಮೋಸಾ ಮತ್ತು ಪಕೋಡಾಗಳನ್ನು ಕರಿದ ಬಳಿಕ ಪಾತ್ರೆಯಲ್ಲಿ ಉಳಿದ ಎಣ್ಣೆಯನ್ನು ಎಸೆಯದೆ ಸಂಗ್ರಹಿಸಿಡಲಾಗುತ್ತದೆ. ನಂತರ ಅದನ್ನೇ ಮತ್ತೊಮ್ಮೆ ಅಡುಗೆಗೆ ಬಳಸಲಾಗುತ್ತದೆ. ಆದರೆ ಈ ಮಿತವ್ಯಯದ ಅಭ್ಯಾಸ ಆರೋಗ್ಯದ ದೃಷ್ಟಿಯಿಂದ ಎಚ್ಚರಿಕೆ ವಹಿಸಬೇಕಾದ ಸಂಗತಿಯಾಗಿದೆ. ಅಡುಗೆ ಎಣ್ಣೆಯನ್ನು ಹೆಚ್ಚಿನ ತಾಪಮಾನದಲ್ಲಿ ಪದೇಪದೇ ಕಾಯಿಸಿದಾಗ ಅದರ ರಾಸಾಯನಿಕ ರಚನೆಯಲ್ಲಿ ಬದಲಾವಣೆ ಉಂಟಾಗುತ್ತದೆ. ಗಾಳಿ, ತೇವಾಂಶ ಮತ್ತು ಆಹಾರದ ಕಣಗಳ ಸಂಪರ್ಕದಿಂದ ಎಣ್ಣೆಯಲ್ಲಿ ಆಕ್ಸಿಡೀಕರಣ ಪ್ರಕ್ರಿಯೆ ನಡೆಯುತ್ತದೆ. ಈ ಸಂದರ್ಭದಲ್ಲಿ ಆಲ್ಡಿಹೈಡ್‌ಗಳು ಹಾಗೂ ಇತರ ಹಾನಿಕಾರಕ ಸಂಯುಕ್ತಗಳು ಉತ್ಪತ್ತಿಯಾಗಬಹುದು. ಇವುಗಳನ್ನು ನಿರಂತರವಾಗಿ ಆಹಾರದ ಮೂಲಕ ದೇಹಕ್ಕೆ ಸೇರಿಸಿಕೊಳ್ಳುವುದು ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದು ಆಹಾರ ಸುರಕ್ಷಾ ತಜ್ಞರು ಎಚ್ಚರಿಸುತ್ತಾರೆ.

ಪದೇಪದೇ ಕಾಯಿಸಿದ ಎಣ್ಣೆಯಲ್ಲಿ ವಿಷಕಾರಿ ಸಂಯುಕ್ತಗಳ ಉತ್ಪತ್ತಿ: ಒಮ್ಮೆ ಎಣ್ಣೆಯನ್ನು ಕಾಯಿಸಿ ಆಹಾರ ಕರಿಯುವುದಕ್ಕೂ ಅದೇ ಎಣ್ಣೆಯನ್ನು ಮತ್ತೆ ಮತ್ತೆ ಹೆಚ್ಚಿನ ತಾಪಮಾನದಲ್ಲಿ ಬಳಸುವುದಕ್ಕೂ ವ್ಯತ್ಯಾಸವಿದೆ. ಪ್ರತಿ ಬಾರಿ ಎಣ್ಣೆಯನ್ನು ಕಾಯಿಸಿದಾಗ ಅದರ ಗುಣಮಟ್ಟ ಕುಸಿಯುವ ಸಾಧ್ಯತೆ ಹೆಚ್ಚುತ್ತದೆ. ಅದರಲ್ಲೂ ಆಹಾರದ ಸಣ್ಣ ತುಣುಕುಗಳು ಎಣ್ಣೆಯಲ್ಲಿ ಉಳಿದಿದ್ದರೆ ಅವು ಸುಟ್ಟು ಎಣ್ಣೆಯ ಗುಣಮಟ್ಟವನ್ನು ಮತ್ತಷ್ಟು ಹಾಳುಮಾಡಬಹುದು. ಇಂತಹ ಪ್ರಕ್ರಿಯೆಯಿಂದ ಆಲ್ಡಿಹೈಡ್‌ಗಳು, ಆಕ್ಸಿಡೀಕರಣಗೊಂಡ ಕೊಬ್ಬಿನ ಅಂಶಗಳು ಮತ್ತು ಟೋಟಲ್ ಪೋಲಾರ್ ಕಾಂಪೌಂಡ್ಸ್ (TPC) ಎಂಬ ಸಂಯುಕ್ತಗಳು ಹೆಚ್ಚಾಗಬಹುದು. ಇವು ದೇಹದಲ್ಲಿ ಆಕ್ಸಿಡೇಟಿವ್ ಒತ್ತಡ ಹಾಗೂ ಉರಿಯೂತಕ್ಕೆ ಕಾರಣವಾಗುವ ಸಾಧ್ಯತೆಯಿದೆ. ಹೀಗಾಗಿ ಬಳಸಿದ ಎಣ್ಣೆಯನ್ನು ಮತ್ತೆ ಮತ್ತೆ ಅಡುಗೆಗೆ ಬಳಸುವ ಅಭ್ಯಾಸವನ್ನು ಕಡಿಮೆ ಮಾಡುವುದು ಉತ್ತಮ.

ಮರುಬಳಕೆಯ ಎಣ್ಣೆ ಕ್ಯಾನ್ಸರ್‌ಗೆ ಕಾರಣವಾಗಬಹುದೇ?

ಇದು ಹಲವರಲ್ಲಿ ಮೂಡುವ ಪ್ರಮುಖ ಪ್ರಶ್ನೆ. ಪದೇಪದೇ ಕಾಯಿಸಿದ ಎಣ್ಣೆಯಲ್ಲಿ ಉತ್ಪತ್ತಿಯಾಗುವ ಕೆಲವು ಹಾನಿಕಾರಕ ಸಂಯುಕ್ತಗಳು ಜೀವಕೋಶಗಳ ಡಿಎನ್‌ಎಗೆ ಹಾನಿ ಮಾಡುವ ಸಾಮರ್ಥ್ಯ ಹೊಂದಿವೆ ಎಂಬುದನ್ನು ಕೆಲವು ಪ್ರಯೋಗಾಲಯ ಮತ್ತು ಪ್ರಾಣಿಗಳ ಮೇಲಿನ ಸಂಶೋಧನೆಗಳು ಸೂಚಿಸಿವೆ. ಇಂತಹ ಬದಲಾವಣೆಗಳು ಕ್ಯಾನ್ಸರ್ ಅಪಾಯದೊಂದಿಗೆ ಸಂಬಂಧ ಹೊಂದಿರಬಹುದು. ಆದರೆ ಮರುಬಳಕೆಯ ಅಡುಗೆ ಎಣ್ಣೆಯನ್ನು ಸೇವಿಸುವುದರಿಂದ ಮನುಷ್ಯರಲ್ಲಿ ನೇರವಾಗಿ ಕ್ಯಾನ್ಸರ್ ಉಂಟಾಗುತ್ತದೆ ಎಂಬುದಕ್ಕೆ ಇನ್ನೂ ನಿರ್ಣಾಯಕ ವೈಜ್ಞಾನಿಕ ಪುರಾವೆಗಳಿಲ್ಲ. ಆದ್ದರಿಂದ ಆತಂಕ ಸೃಷ್ಟಿಸುವ ಬದಲು, ಆರೋಗ್ಯದ ಅಪಾಯವನ್ನು ಕಡಿಮೆ ಮಾಡಲು ಇಂತಹ ಎಣ್ಣೆಯ ನಿರಂತರ ಬಳಕೆಯನ್ನು ತಪ್ಪಿಸುವುದು ಅಗತ್ಯ.

ಆರೋಗ್ಯದ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದು?

ಹೃದಯದ ಆರೋಗ್ಯಕ್ಕೆ ಅಪಾಯ: ಪದೇಪದೇ ಕಾಯಿಸಿದ ಎಣ್ಣೆಯಲ್ಲಿರುವ ಆಕ್ಸಿಡೀಕರಣಗೊಂಡ ಕೊಬ್ಬಿನ ಸಂಯುಕ್ತಗಳು ದೇಹದಲ್ಲಿ ಉರಿಯೂತದ ಪ್ರಕ್ರಿಯೆಯನ್ನು ಹೆಚ್ಚಿಸಬಹುದು. ಇವುಗಳ ನಿರಂತರ ಸೇವನೆ ಹೃದಯ ಮತ್ತು ರಕ್ತನಾಳಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಯಿದೆ. **ಯಕೃತ್ತಿನ ಮೇಲೆ ಪರಿಣಾಮ:** ಹಾಳಾದ ಎಣ್ಣೆಯಲ್ಲಿರುವ ಕೆಲವು ಸಂಯುಕ್ತಗಳು ಯಕೃತ್ತಿನ ಕಾರ್ಯನಿರ್ವಹಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು ಎಂಬುದನ್ನು ಕೆಲವು ಸಂಶೋಧನೆಗಳು ಸೂಚಿಸಿವೆ.

ಜೀರ್ಣಾಂಗ ವ್ಯವಸ್ಥೆಗೆ ತೊಂದರೆ: ಕಳಪೆ ಗುಣಮಟ್ಟದ ಎಣ್ಣೆಯಲ್ಲಿ ತಯಾರಿಸಿದ ಆಹಾರವನ್ನು ನಿರಂತರವಾಗಿ ಸೇವಿಸುವುದರಿಂದ ಜೀರ್ಣಾಂಗ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಯಿದೆ.

ದೇಹದಲ್ಲಿ ಉರಿಯೂತ: ಮರುಮರು ಕಾಯಿಸಿದ ಎಣ್ಣೆಯಲ್ಲಿನ ಹಾನಿಕಾರಕ ಸಂಯುಕ್ತಗಳು ದೇಹದಲ್ಲಿ ಆಕ್ಸಿಡೇಟಿವ್ ಒತ್ತಡವನ್ನು ಹೆಚ್ಚಿಸಬಹುದು. ಇದು ದೀರ್ಘಕಾಲದಲ್ಲಿ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುವ ಸಾಧ್ಯತೆಯಿದೆ.

ಎಣ್ಣೆ ಹಾಳಾಗಿರುವುದನ್ನು ಗುರುತಿಸುವುದು ಹೇಗೆ?

ಅಡುಗೆ ಎಣ್ಣೆಯ ಗುಣಮಟ್ಟ ಹದಗೆಟ್ಟಾಗ ಕೆಲವು ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಅವುಗಳನ್ನು ನಿರ್ಲಕ್ಷಿಸಬಾರದು. ಎಣ್ಣೆಯ ಬಣ್ಣ ಸಾಮಾನ್ಯಕ್ಕಿಂತ ಹೆಚ್ಚು ಗಾಢವಾಗುವುದು. ಎಣ್ಣೆ ದಪ್ಪವಾಗಿ ಅಥವಾ ಜಿಗುಟಾಗಿ ಕಾಣಿಸುವುದು. ಎಣ್ಣೆಯಿಂದ ಕೆಟ್ಟ ವಾಸನೆ ಬರುವುದು. ಕಡಿಮೆ ತಾಪಮಾನದಲ್ಲಿಯೇ ಹೊಗೆ ಕಾಣಿಸಿಕೊಳ್ಳುವುದು. ಎಣ್ಣೆಯಲ್ಲಿ ಅತಿಯಾಗಿ ನೊರೆ ಉಂಟಾಗುವುದು. ಕರಿಯುವಾಗ ಎಣ್ಣೆಯ ಸ್ವರೂಪದಲ್ಲಿ ಸ್ಪಷ್ಟ ಬದಲಾವಣೆ ಕಾಣಿಸಿಕೊಳ್ಳುವುದು. ಇಂತಹ ಲಕ್ಷಣಗಳು ಕಂಡುಬಂದರೆ ಆ ಎಣ್ಣೆಯನ್ನು ಮತ್ತೆ ಆಹಾರ ತಯಾರಿಸಲು ಬಳಸಬಾರದು. ಗಮನಿಸಬೇಕಾದ ಸಂಗತಿಯೆಂದರೆ, ಎಣ್ಣೆ ನೋಡಲು ಸ್ವಚ್ಛವಾಗಿದ್ದರೂ ಅದರಲ್ಲಿನ ಹಾನಿಕಾರಕ ಸಂಯುಕ್ತಗಳು ಹೆಚ್ಚಾಗಿರುವ ಸಾಧ್ಯತೆಯಿದೆ.

FSSAI ಮಾರ್ಗಸೂಚಿ ಏನು ಹೇಳುತ್ತದೆ?

ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (FSSAI) ಕರಿಯಲು ಬಳಸುವ ಎಣ್ಣೆಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಮಹತ್ವದ ಮಾರ್ಗಸೂಚಿಗಳನ್ನು ರೂಪಿಸಿದೆ. ಎಣ್ಣೆಯಲ್ಲಿ ಟೋಟಲ್ ಪೋಲಾರ್ ಕಾಂಪೌಂಡ್ಸ್ (TPC) ಪ್ರಮಾಣ ಶೇ.25 ಮೀರಬಾರದು. ಈ ಪ್ರಮಾಣ ಮೀರಿದ ಎಣ್ಣೆಯನ್ನು ಆಹಾರ ತಯಾರಿಕೆಗೆ ಬಳಸಬಾರದು. ವಿಶೇಷವಾಗಿ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು ಮತ್ತು ಆಹಾರ ತಯಾರಿಕಾ ಘಟಕಗಳು ಬಳಸಿದ ಎಣ್ಣೆಯ ಗುಣಮಟ್ಟದ ಬಗ್ಗೆ ಹೆಚ್ಚಿನ ಜಾಗ್ರತೆ ವಹಿಸಬೇಕು. ಮನೆಯಲ್ಲಿಯೂ ಎಣ್ಣೆಯನ್ನು ಪದೇಪದೇ ಮರುಬಳಕೆ ಮಾಡುವುದನ್ನು ಸಾಧ್ಯವಾದಷ್ಟು ತಪ್ಪಿಸುವುದು ಉತ್ತಮ. ಎಣ್ಣೆಯನ್ನು ಎಷ್ಟು ಬಾರಿ ಬಳಸಬಹುದು ಎಂಬುದಕ್ಕೆ ಎಲ್ಲ ಸಂದರ್ಭಗಳಿಗೂ ಅನ್ವಯಿಸುವ ಒಂದೇ ನಿಯಮವಿಲ್ಲ. ಎಣ್ಣೆಯ ಪ್ರಕಾರ, ಕಾಯಿಸುವ ತಾಪಮಾನ ಮತ್ತು ಬಳಕೆಯ ಅವಧಿಯನ್ನು ಅವಲಂಬಿಸಿ ಅದರ ಗುಣಮಟ್ಟ ಬದಲಾಗುತ್ತದೆ.

ಅಡುಗೆ ಎಣ್ಣೆಯ ಬಳಕೆಯಲ್ಲಿ ಈ ಬದಲಾವಣೆಗಳನ್ನು ಮಾಡಿಕೊಳ್ಳಿ: ಆರೋಗ್ಯದ ಅಪಾಯವನ್ನು ಕಡಿಮೆ ಮಾಡಲು ಪ್ರತಿಯೊಂದು ಮನೆಯಲ್ಲಿಯೂ ಕೆಲವು ಸರಳ ಅಭ್ಯಾಸಗಳನ್ನು ರೂಢಿಸಿಕೊಳ್ಳಬಹುದು. ಆಹಾರ ತಯಾರಿಸಲು ಅಗತ್ಯವಿರುವಷ್ಟು ಮಾತ್ರ ಎಣ್ಣೆಯನ್ನು ಬಳಸಿ. ಎಣ್ಣೆಯಿಂದ ಹೊಗೆ ಬರುವಷ್ಟು ಹೆಚ್ಚಿನ ತಾಪಮಾನದಲ್ಲಿ ಕಾಯಿಸಬೇಡಿ. ಒಂದೇ ಎಣ್ಣೆಯನ್ನು ಪದೇಪದೇ ಕರಿಯಲು ಬಳಸುವುದನ್ನು ತಪ್ಪಿಸಿ. ಬಳಸಿದ ಎಣ್ಣೆಗೆ ಹೊಸ ಎಣ್ಣೆಯನ್ನು ಸೇರಿಸುವುದರಿಂದ ಅದರ ಗುಣಮಟ್ಟ ಸುಧಾರಿಸುತ್ತದೆ ಎಂದು ಭಾವಿಸಬೇಡಿ. ಹುರಿಯುವ ಆಹಾರಗಳ ಪ್ರಮಾಣವನ್ನು ಕಡಿಮೆ ಮಾಡಿ. ಹಬೆಯಲ್ಲಿ ಬೇಯಿಸುವುದು, ಗ್ರಿಲ್ ಮಾಡುವುದು ಮತ್ತು ಬೇಕ್ ಮಾಡುವ ವಿಧಾನಗಳಿಗೆ ಆದ್ಯತೆ ನೀಡಿ. ಎಣ್ಣೆಯಲ್ಲಿ ಕೆಟ್ಟ ವಾಸನೆ, ಬಣ್ಣ ಬದಲಾವಣೆ ಅಥವಾ ಅತಿಯಾದ ನೊರೆ ಕಂಡುಬಂದರೆ ಅದನ್ನು ತ್ಯಜಿಸಿ. ಬಳಸಿದ ಎಣ್ಣೆಯನ್ನು ಚಿರಂಡಿ ಅಥವಾ ಸಿಂಕ್‌ಗೆ ಸುರಿಯದೆ, ಸೂಕ್ತವಾಗಿ ಸಂಗ್ರಹಿಸಿ ವಿಲೇವಾರಿ ಮಾಡಿ.

ಹಣಕ್ಕಿಂತ ಆರೋಗ್ಯವೇ ಮುಖ್ಯ : ಅಡುಗೆ ಎಣ್ಣೆಯನ್ನು ಮತ್ತೆ ಬಳಸುವುದರಿಂದ ಅಲ್ಪ ಪ್ರಮಾಣದ ಹಣ ಉಳಿಯಬಹುದು. ಆದರೆ ಅದಕ್ಕಾಗಿ ಆರೋಗ್ಯದ ವಿಚಾರದಲ್ಲಿ ರಾಜಿ ಮಾಡಿಕೊಳ್ಳುವುದು ಸರಿಯಲ್ಲ. ವಿಶೇಷವಾಗಿ ಮಕ್ಕಳಿರುವ ಮನೆಗಳಲ್ಲಿ ಆಹಾರದ ಗುಣಮಟ್ಟ ಮತ್ತು ಅಡುಗೆಗೆ ಬಳಸುವ ಎಣ್ಣೆಯ ಸುರಕ್ಷತೆಯ ಬಗ್ಗೆ ಪೋಷಕರು ಹೆಚ್ಚಿನ ಗಮನ ಹರಿಸಬೇಕು. ಒಮ್ಮೆ ಮರುಬಳಕೆಯ ಎಣ್ಣೆಯಲ್ಲಿ ತಯಾರಿಸಿದ ಆಹಾರ ಸೇವಿಸಿದ್ದೀರಿ ಎಂದ ಮಾತ್ರಕ್ಕೆ ಆತಂಕಪಡುವ ಅಗತ್ಯವಿಲ್ಲ. ಆದರೆ ಅದನ್ನೇ ದಿನನಿತ್ಯದ ಅಭ್ಯಾಸವನ್ನಾಗಿ ಮಾಡಿಕೊಳ್ಳುವುದು ಸೂಕ್ತವಲ್ಲ. ಅಡುಗೆ ಮನೆಯಲ್ಲಿನ ಸಣ್ಣ ನಿರ್ಲಕ್ಷ್ಯವೂ ದೀರ್ಘಕಾಲದಲ್ಲಿ ಆರೋಗ್ಯದ ಮೇಲೆ ಪರಿಣಾಮ ಬೀರಬಹುದು. ಹಣ ಉಳಿಸುವ ಭರದಲ್ಲಿ ಆರೋಗ್ಯವನ್ನು ಕಳೆದುಕೊಳ್ಳಬೇಡಿ. ಅಡುಗೆ ಎಣ್ಣೆಯನ್ನು ಮಿತವಾಗಿ ಬಳಸಿ, ಮರುಬಳಕೆಯ ಅಭ್ಯಾಸಕ್ಕೆ ಕಡಿವಾಣ ಹಾಕಿ. ಆರೋಗ್ಯಕರ ಆಹಾರವೇ ಆರೋಗ್ಯಕರ ಜೀವನದ ಮೊದಲ ಹೆಜ್ಜೆ!

ಸ್ಮಾರ್ಟ್‌ವಾಚ್ ಬಳಕೆ ಆರೋಗ್ಯಕ್ಕೆ ವರವೇ ಅಥವಾ ಸಮಸ್ಯೆಯೇ?



ಡಿಜಿಟಲ್ ಯುಗದಲ್ಲಿ ಸ್ಮಾರ್ಟ್‌ವಾಚ್ ಕೇವಲ ಸಮಯ ನೋಡುವ ಸಾಧನವಾಗಿ ಉಳಿದಿಲ್ಲ. ನಮ್ಮ ದೈನಂದಿನ ಚಟುವಟಿಕೆ, ಹೃದಯ ಬಡಿತ, ನಿದ್ರೆಯ ಮಾದರಿ, ವ್ಯಾಯಾಮ ಹಾಗೂ ರಕ್ತದಲ್ಲಿನ ಆಮ್ಲಜನಕದ ಮಟ್ಟದಂತಹ ಹಲವು ಮಾಹಿತಿಗಳನ್ನು ನೀಡುವ ವೈಯಕ್ತಿಕ ಆರೋಗ್ಯ ಸಹಾಯಕನಾಗಿ ಬೆಳೆದಿದೆ. ಹೀಗಾಗಿ ಅನೇಕರು ಹಗಲು-ರಾತ್ರಿ ಎನ್ನದೆ ಸ್ಮಾರ್ಟ್‌ವಾಚ್ ಧರಿಸುವ ಅಭ್ಯಾಸ ಬೆಳೆಸಿಕೊಂಡಿದ್ದಾರೆ. ಆದರೆ ನಿರಂತರ ಬಳಕೆ ನಿಜಕ್ಕೂ ಸುರಕ್ಷಿತವೇ? ಚರ್ಮದ ಸಮಸ್ಯೆ, ವಿಕಿರಣದ ಭೀತಿ, ನಿದ್ರೆಯ ವ್ಯತ್ಯಯ ಹಾಗೂ ತಪ್ಪು ಆರೋಗ್ಯ ಮಾಹಿತಿಯಿಂದ ಉಂಟಾಗಬಹುದಾದ ಆತಂಕಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ. ಸ್ಮಾರ್ಟ್‌ವಾಚ್‌ಗಳು ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ದೈಹಿಕ ಚಟುವಟಿಕೆಯನ್ನು ಹೆಚ್ಚಿಸಲು ನೆರವಾಗುತ್ತವೆ. ಆದರೆ ಅವು ನೀಡುವ ಪ್ರತಿಯೊಂದು ಅಂಕಿ-ಅಂಶವನ್ನೂ ವೈದ್ಯಕೀಯ ವರದಿಯಂತೆ ಪರಿಗಣಿಸುವುದು ಸರಿಯಲ್ಲ. ಸರಿಯಾದ ಬಳಕೆಯ ಕ್ರಮಗಳನ್ನು ತಿಳಿದುಕೊಂಡರೆ ಈ ಸಾಧನದ ಪ್ರಯೋಜನಗಳನ್ನು ಪಡೆದುಕೊಳ್ಳುವುದರ ಜೊತೆಗೆ ಸಂಭವನೀಯ ಸಮಸ್ಯೆಗಳಿಂದಲೂ ದೂರವಿರಬಹುದು.

ನಿರಂತರ ಬಳಕೆಯಿಂದ ಚರ್ಮಕ್ಕೆ ತೊಂದರೆಯಾಗಬಹುದೇ?

ಸ್ಮಾರ್ಟ್‌ವಾಚ್ ಅನ್ನು ದೀರ್ಘಕಾಲ ಧರಿಸುವುದರಿಂದ ಕೆಲವರಲ್ಲಿ ಚರ್ಮದ ಅಲರ್ಜಿ ಅಥವಾ ಕಿರಿಕಿರಿ ಕಾಣಿಸಿಕೊಳ್ಳಬಹುದು. ಗಡಿಯಾರದ ಪಟ್ಟಿ ಚರ್ಮಕ್ಕೆ ನಿರಂತರವಾಗಿ ತಾಗಿರುವುದು, ಅತಿಯಾಗಿ ಬಿಗಿಯಾಗಿ ಕಟ್ಟುವುದು, ಬೆವರು ಮತ್ತು ತೇವಾಂಶ ಸಂಗ್ರಹವಾಗುವುದು ಹಾಗೂ ಪಟ್ಟಿಯನ್ನು ಸ್ವಚ್ಛಗೊಳಿಸದಿರುವುದು ಇದಕ್ಕೆ ಪ್ರಮುಖ ಕಾರಣಗಳಾಗಬಹುದು. ಇದರಿಂದ ಚರ್ಮ ಕೆಂಪಾಗುವುದು, ತುರಿಕೆ, ಉರಿ, ಊತ ಅಥವಾ ಕಾಂಟ್ಯಾಕ್ಟ್ ಡರ್ಮಟೈಟಿಸ್‌ನಂತಹ ಸಮಸ್ಯೆಗಳು ಉಂಟಾಗಬಹುದು. ಸೂಕ್ಷ್ಮ ಚರ್ಮ ಹೊಂದಿರುವವರು ಮತ್ತು ಹೆಚ್ಚು ಬೆವರುವವರು ಹೆಚ್ಚಿನ ಕಾಳಜಿ ವಹಿಸಬೇಕು. ವಾಚ್ ಅನ್ನು ಅತಿಯಾಗಿ ಬಿಗಿಯಾಗಿ ಕಟ್ಟಿದರೆ ಚರ್ಮದ ಮೇಲೆ ಒತ್ತಡ ಮತ್ತು ಗುರುತುಗಳು ಉಂಟಾಗಬಹುದು. ಮತ್ತೊಂದೆಡೆ, ತುಂಬಾ ಸಡಿಲವಾಗಿ ಧರಿಸಿದರೆ ಹೃದಯ ಬಡಿತದಂತಹ ಮಾಹಿತಿಯನ್ನು ದಾಖಲಿಸುವ ಸಂವೇದಕಗಳ ನಿಖರತೆ ಕಡಿಮೆಯಾಗಬಹುದು. ಆದ್ದರಿಂದ ವಾಚ್ ಚರ್ಮಕ್ಕೆ ಸರಿಯಾಗಿ ಹೊಂದಿಕೊಳ್ಳುವಷ್ಟು ಮಾತ್ರ ಬಿಗಿಯಾಗಿರಲಿ. ನೋವು, ಒತ್ತಡ ಅಥವಾ ಗುರುತು ಉಂಟಾಗುವಷ್ಟು ಬಿಗಿಯಾಗಿ ಧರಿಸಬಾರದು. ಚರ್ಮದಲ್ಲಿ ತುರಿಕೆ ಅಥವಾ ಕೆಂಪು ಕಾಣಿಸಿಕೊಂಡರೆ ವಾಚ್ ತೆಗೆದು ಚರ್ಮಕ್ಕೆ ವಿಶ್ರಾಂತಿ ನೀಡಬೇಕು. ಸಮಸ್ಯೆ ಮುಂದುವರಿದರೆ ವೈದ್ಯರನ್ನು ಸಂಪರ್ಕಿಸುವುದು ಉತ್ತಮ.

ಸ್ಮಾರ್ಟ್‌ವಾಚ್‌ನಿಂದ ಹೊರಸೂಸುವ ವಿಕಿರಣ ಅಪಾಯಕಾರಿಯೇ?

ಸ್ಮಾರ್ಟ್‌ವಾಚ್‌ಗಳ ಬಗ್ಗೆ ಅನೇಕರು ವ್ಯಕ್ತಪಡಿಸುವ ಪ್ರಮುಖ ಆತಂಕವೆಂದರೆ ಅವುಗಳಿಂದ ಹೊರಸೂಸುವ ವಿಕಿರಣ. ಬಹುತೇಕ ಸ್ಮಾರ್ಟ್‌ವಾಚ್‌ಗಳು ಬ್ಲೂಟೂತ್ ಮತ್ತು ವೈ-ಫೈ ಸೇರಿದಂತೆ ಕಡಿಮೆ ಶಕ್ತಿಯ ವೈರ್‌ಲೆಸ್ ತಂತ್ರಜ್ಞಾನಗಳನ್ನು ಬಳಸುತ್ತವೆ. ಕೆಲವು ಮಾದರಿಗಳಲ್ಲಿ ಮೊಬೈಲ್ ನೆಟ್‌ವರ್ಕ್ ಸಂಪರ್ಕವೂ ಇರುತ್ತದೆ. ಇವುಗಳಿಂದ ಹೊರಸೂಸುವ ರೇಡಿಯೋ ತರಂಗಗಳನ್ನು ಶಕ್ತಿ ಅಯಾನೀಕರಿಸದ ವಿಕಿರಣದ ವರ್ಗಕ್ಕೆ ಸೇರಿದೆ. ಎಕ್ಸ್‌ರೇಯಂತಹ ಅಯಾನೀಕರಿಸುವ ವಿಕಿರಣಕ್ಕೆ ಹೋಲಿಸಿದರೆ ಈ ವಿಕಿರಣದ ಶಕ್ತಿ ಕಡಿಮೆ. ಸಾಮಾನ್ಯ ಬಳಕೆಯಲ್ಲಿರುವ ಸ್ಮಾರ್ಟ್‌ವಾಚ್‌ಗಳು ಕ್ಯಾನ್ಸರ್‌ಗೆ ಕಾರಣವಾಗುತ್ತವೆ ಎಂಬುದನ್ನು ಸಾಬೀತುಪಡಿಸುವ ವಿಶ್ವಾಸಾರ್ಹ ವೈಜ್ಞಾನಿಕ ಪುರಾವೆಗಳು ಪ್ರಸ್ತುತ ಲಭ್ಯವಿಲ್ಲ. ಆದ್ದರಿಂದ ವಿಕಿರಣದ ಭೀತಿಯಿಂದಲೇ ಸ್ಮಾರ್ಟ್‌ವಾಚ್ ಬಳಕೆಯನ್ನು ನಿಲ್ಲಿಸುವ ಅಗತ್ಯವಿದೆ ಎಂದು ಹೇಳಲಾಗುವುದಿಲ್ಲ. ಆದರೂ ಸಾಧನವನ್ನು ತಯಾರಕರ ಸೂಚನೆಯಂತೆ ಬಳಸುವುದು ಮತ್ತು ಅಗತ್ಯವಿಲ್ಲದ ವೈರ್‌ಲೆಸ್ ಸಂಪರ್ಕಗಳನ್ನು ಆಫ್ ಮಾಡುವುದು ಉತ್ತಮ ಅಭ್ಯಾಸ.

ರಾತ್ರಿ ಸ್ಮಾರ್ಟ್‌ವಾಚ್ ಧರಿಸುವುದರಿಂದ ನಿದ್ರೆಗೆ ತೊಂದರೆಯಾಗುತ್ತದೆಯೇ?

ನಿದ್ರೆಯ ಅವಧಿ, ಹೃದಯ ಬಡಿತ ಮತ್ತು ನಿದ್ರೆಯ ಮಾದರಿಗಳನ್ನು ಅಂದಾಜು ಮಾಡಲು ಸ್ಮಾರ್ಟ್‌ವಾಚ್‌ಗಳು ನೆರವಾಗುತ್ತವೆ. ಆದರೆ ಇವು ನೀಡುವ ನಿದ್ರೆಯ ಹಂತಗಳ ಮಾಹಿತಿ ವೈದ್ಯಕೀಯ ನಿದ್ರೆ ಪರೀಕ್ಷೆಗೆ ಪರ್ಯಾಯವಲ್ಲ. ನಿದ್ರಾಹೀನತೆ ಅಥವಾ ಇತರ ನಿದ್ರಾ ಸಮಸ್ಯೆಗಳನ್ನು ಪತ್ತೆಹಚ್ಚಲು ಸ್ಮಾರ್ಟ್‌ವಾಚ್‌ನ ಮಾಹಿತಿಯೊಂದನ್ನೇ ಅವಲಂಬಿಸಬಾರದು. ಕೆಲವು ಸಂದರ್ಭಗಳಲ್ಲಿ ವಾಚ್‌ನ ಪರದೆ ಬೆಳಗುವುದು, ನಿರಂತರ ಅಧಿಸೂಚನೆಗಳು, ಕಂಪನಗಳು ಅಥವಾ ಪಟ್ಟಿಯಿಂದ ಉಂಟಾಗುವ ಅಸ್ವಸ್ಥತೆ ನಿದ್ರೆಗೆ ಅಡ್ಡಿಯಾಗಬಹುದು. ಪ್ರತಿದಿನ ನಿದ್ರೆಯ ಸ್ಕೋರ್ ಪರಿಶೀಲಿಸಿ ಅದು ಕಡಿಮೆಯಾಗಿದೆ ಎಂದು ಆತಂಕಪಡುವುದೂ ಮಾನಸಿಕ ಒತ್ತಡಕ್ಕೆ ಕಾರಣವಾಗಬಹುದು. ಈ ಆತಂಕವೇ ನಿದ್ರೆಯ ಗುಣಮಟ್ಟದ ಮೇಲೆ ಪರಿಣಾಮ ಬೀರಬಹುದು. ನಿದ್ರೆಯ ವೇಳೆ ವಾಚ್ ಧರಿಸುವು

ಪೋಷಕರಿಲ್ಲದ ಮಕ್ಕಳಿಗೆ ಸರ್ಕಾರದ ನೆರವು - ಶಿಕ್ಷಣದಿಂದ ಆರ್ಥಿಕ ಸೌಲಭ್ಯಗಳವರೆಗೆ ಆಸರೆ

ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ರಶ್ಮಿ ಅಶೋಕ್ ನೆಕ್ರಾಜೆ ಮಾಹಿತಿ



ಕೋವಿಡ್ ಮಹಾಮಾರಿಯ ಕರಾಳ ಛಾಯೆಯಲ್ಲಿ ತಂದೆ-ತಾಯಿ ಅಥವಾ ಒಬ್ಬ ಪೋಷಕರನ್ನು ಕಳೆದುಕೊಂಡು ಅನಾಥತೆ ಹಾಗೂ ಅನಿಶ್ಚಿತತೆಯ ನಡುವೆ ಬದುಕುತ್ತಿರುವ ಮಕ್ಕಳಿಗೆ ಸರ್ಕಾರ ವಿವಿಧ ಯೋಜನೆಗಳ ಮೂಲಕ ಆಸರೆಯಾಗಿದೆ. ಆರ್ಥಿಕ ನೆರವಿನಿಂದ ಹಿಡಿದು ಉಚಿತ ಶಿಕ್ಷಣ, ಉನ್ನತ ವಿದ್ಯಾಭ್ಯಾಸ, ಕೌಶಲ್ಯ ಅಭಿವೃದ್ಧಿ ಹಾಗೂ ಪುನರ್ವಸತಿಯವರೆಗೆ ಹಲವು ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಮಕ್ಕಳ ಭವಿಷ್ಯ ಭದ್ರಪಡಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಬಾಲಸೇವಾ ಯೋಜನೆ, ಪಿ.ಎಂ. ಕೇರ್ಸ್ ಫಾರ್ ಚಿಲ್ಡ್ರನ್ ಸೇರಿದಂತೆ ವಿವಿಧ ಯೋಜನೆಗಳು ನೆರವಾಗುತ್ತಿವೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ನಿರೂಪಣಾಧಿಕಾರಿ ರಶ್ಮಿ ಅಶೋಕ್ ನೆಕ್ರಾಜೆ ಅವರು ತಿಳಿಸಿದ್ದಾರೆ. ಅವರು ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಮಂಗಳೂರು ಪ್ರೆಸ್‌ಕ್ಲಬ್ ಹಾಗೂ ಪತ್ರಿಕಾ ಭವನ ಟ್ರಸ್ಟ್ ವತಿಯಿಂದ ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಿದ್ದ ಮಾಧ್ಯಮ ಸಂವಾದ ಮತ್ತು ಮಕ್ಕಳ ರಕ್ಷಣಾ ಕಾನೂನು ಮಾಹಿತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ತಿಂಗಳಿಗೆ ೩,೫೦೦ ಆರ್ಥಿಕ ನೆರವು: ಕೋವಿಡ್-19 ಕಾರಣದಿಂದ ಇಬ್ಬರು ಪೋಷಕರನ್ನು ಅಥವಾ ಒಬ್ಬ ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ ಮುಖ್ಯಮಂತ್ರಿ ಬಾಲಸೇವಾ ಯೋಜನೆಯಡಿ ಪ್ರತಿ ತಿಂಗಳು ತಲಾ 3,500 ಆರ್ಥಿಕ ನೆರವು ನೀಡಲಾಗುತ್ತದೆ. ಈ ಮೊತ್ತವನ್ನು ಮಗು ಮತ್ತು ಮಗುವಿನ ಕಾನೂನುಬದ್ಧ ಪೋಷಕರ ಜಂಟಿ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಯೋಜನೆಯಡಿ ಇದುವರೆಗೆ 11 ಮಕ್ಕಳು ಸೌಲಭ್ಯ ಪಡೆಯಲು ನೋಂದಾಯಿಸಿಕೊಂಡಿದ್ದಾರೆ. ಹತ್ತು ವರ್ಷದೊಳಗಿನ ಮಕ್ಕಳ ಪಾಲನೆಗೆ ಏಸ್ತ್ರತ ಕುಟುಂಬದ ಸದಸ್ಯರು ಲಭ್ಯವಿಲ್ಲದಿದ್ದರೆ, ಅಂತಹ ಮಕ್ಕಳನ್ನು ರಕ್ಷಣೆ ಮತ್ತು ಪಾಲನೆಗಾಗಿ ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳಿಗೆ ದಾಖಲಿಸಲಾಗುತ್ತದೆ. ರಾಜ್ಯ ಸರ್ಕಾರದ ಮಾದರಿ ವಸತಿ ಶಾಲೆಗಳಲ್ಲಿ ಲಭ್ಯವಿರುವ ತರಗತಿಗಳಿಗೆ ಯಾವುದೇ ಪ್ರವೇಶ ಪರೀಕ್ಷೆಯಿಲ್ಲದೆ ನೇರ ಪ್ರವೇಶ ಕಲ್ಪಿಸಿ ಉಚಿತ ಗುಣಮಟ್ಟದ ಶಿಕ್ಷಣ ನೀಡಲಾಗುತ್ತದೆ. SSLC ಪೂರ್ಣಗೊಳಿಸಿದ ಮಕ್ಕಳಿಗೆ ಉನ್ನತ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿಗಾಗಿ ಲ್ಯಾಪ್‌ಟಾಪ್ ಅಥವಾ ಟ್ಯಾಬ್ ವಿತರಿಸಲಾಗುತ್ತದೆ. ಹೆಣ್ಣು ಮಕ್ಕಳಿಗೆ 21 ವರ್ಷ ಪೂರ್ಣಗೊಂಡ ಬಳಿಕ ವಿವಾಹ, ಉನ್ನತ ಶಿಕ್ಷಣ ಅಥವಾ ಸ್ವಯಂ ಉದ್ಯೋಗಕ್ಕಾಗಿ ತಲಾ 1 ಲಕ್ಷ ಆರ್ಥಿಕ ನೆರವು ನೀಡುವ ಸೌಲಭ್ಯವೂ ಇದೆ ಎಂದು ಅವರು ವಿವರಿಸಿದರು.

29 ಮಕ್ಕಳಿಗೆ ಪುನರ್ವಸತಿ ನೆರವು: ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳಿಂದ ಬಿಡುಗಡೆಯಾಗಿ 18 ವರ್ಷ ಮೀರಿದ ಅರ್ಹ ಮಕ್ಕಳಿಗೆ ಆರ್ಥಿಕವಾಗಿ ಸ್ವಾವಲಂಬಿಗಳಾಗುವ ವರೆಗೆ ಅಥವಾ ಗರಿಷ್ಠ ಮೂರು ವರ್ಷಗಳ ಅವಧಿಗೆ ಮಾಸಿಕ 5,000 ನೆರವು ನೀಡಲಾಗುತ್ತದೆ. ಉಪಕಾರ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 29 ಫಲಾನುಭವಿಗಳು ಈ ಸೌಲಭ್ಯ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

ದತ್ತು ಸ್ವೀಕಾರಕ್ಕೆ ಕಾನೂನುಬದ್ಧ ಪ್ರಕ್ರಿಯೆ ಕಡ್ಡಾಯ: ಮಕ್ಕಳ ಹಿತದೃಷ್ಟಿಯಿಂದ ದತ್ತು ಸ್ವೀಕಾರಕ್ಕೆ ಸಂಬಂಧಿಸಿದ ಕಾನೂನು ನಿಯಮಗಳ ಬಗ್ಗೆಯೂ ರಶ್ಮಿ ನೆಕ್ರಾಜೆ ಮಾಹಿತಿ ನೀಡಿದರು. ದಂಪತಿ ಅಥವಾ ಏಕ ಪೋಷಕರು ಮಕ್ಕಳನ್ನು ದತ್ತು ಪಡೆಯಲು ಅವಕಾಶವಿದೆ. ಮಲತಂದೆ ಅಥವಾ ಮಲತಾಯಿ ಕೂಡ ತಮ್ಮ ಹಿಂದಿನ ವಿವಾಹದಿಂದ ಜನಿಸಿದ ಮಗುವನ್ನು ಕಾನೂನುಬದ್ಧವಾಗಿ ದತ್ತು ಪಡೆಯುವುದು ಅಗತ್ಯವಾಗಿದೆ. ಮಗುವಿನ ತಂದೆ ಅಥವಾ ತಾಯಿಯ ಸಹೋದರ, ಸಹೋದರಿ ಹಾಗೂ ತಾತ-ಅಜ್ಜಿಯಂತಹ ಕಾನೂನಿನಲ್ಲಿ ಗುರುತಿಸಲ್ಪಟ್ಟ ಸಂಬಂಧಿಕರೂ ಮಗುವನ್ನು ದತ್ತು ಪಡೆಯಬಹುದು. ಇದಕ್ಕೆ ಜೈವಿಕ ಪೋಷಕರ ಒಪ್ಪಿಗೆ, ಸಂಬಂಧದ ಪುರಾವೆ ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸಿ ನಿಗದಿತ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕು. ದತ್ತು ನಿಯಮಾವಳಿಗಳ ಪ್ರಕಾರ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಂದ ದತ್ತು ಆದೇಶ ಪಡೆದ ಬಳಿಕವೇ ಕಾನೂನು ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ ಎಂದು ವಿವರಿಸಿದರು.

15 ಮಕ್ಕಳಿಗೆ ಪೋಷಕತ್ವ ಯೋಜನೆಯ ಆಸರೆ: ಕುಟುಂಬದೊಂದಿಗೆ ಪುನಃ ಸೇರ್ಪಡೆಗೊಳ್ಳಲು ಸಾಧ್ಯವಾಗದ 7ರಿಂದ 18 ವರ್ಷದೊಳಗಿನ ಮಕ್ಕಳಿಗೆ ಪೋಷಕತ್ವ ಯೋಜನೆಯ ಮೂಲಕ ಪರ್ಯಾಯ ಕುಟುಂಬದ ವಾತಾವರಣದಲ್ಲಿ ಬೆಳೆಯಲು ಅವಕಾಶ ಕಲ್ಪಿಸಲಾಗುತ್ತದೆ. ಜೈವಿಕ ಪೋಷಕರಲ್ಲದ ಕುಟುಂಬಗಳು ಇಂತಹ ಮಕ್ಕಳ ಆರೈಕೆ, ಆರೋಗ್ಯ ಹಾಗೂ ಶಿಕ್ಷಣದ ಜವಾಬ್ದಾರಿಯನ್ನು ಮಹಿಸಿಕೊಳ್ಳುತ್ತವೆ. ಮಕ್ಕಳ ರಕ್ಷಣಾ ಘಟಕವು ನಿರಂತರ ಮೇಲ್ವಿಚಾರಣೆ ನಡೆಸುತ್ತದೆ. ಈ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 15 ಮಕ್ಕಳು ಸೇರ್ಪಡೆಯಾಗಿದ್ದಾರೆ. ಪೋಷಕತ್ವ ಮತ್ತು ದತ್ತು ಸ್ವೀಕಾರ ಎರಡೂ ವಿಭಿನ್ನ ಕಾನೂನು ಪ್ರಕ್ರಿಯೆಗಳಾಗಿದ್ದು, ಪೋಷಕತ್ವದಡಿ ಮಗುವನ್ನು ಆರೈಕೆ ಮಾಡುವ ಕುಟುಂಬಕ್ಕೆ ಮುಂದಿನ ಹಂತದಲ್ಲಿ ಕಾನೂನುಬದ್ಧವಾಗಿ ದತ್ತು ಪಡೆಯುವ ಅವಕಾಶವೂ ಇರುತ್ತದೆ ಎಂದು ತಿಳಿಸಿದರು.

೬೦೩ ಮಕ್ಕಳಿಗೆ ಪ್ರಾಯೋಜಕತ್ವ ಯೋಜನೆಯ ನೆರವಿನ ನಿರೀಕ್ಷೆ ಪೋಷಕರಿಲ್ಲದ ಅಥವಾ ವಿವಿಧ ಕಾರಣಗಳಿಂದ ಪೋಷಕರ ಆರೈಕೆಯಿಂದ ವಂಚಿತರಾಗಿರುವ ಮಕ್ಕಳನ್ನು ಮಕ್ಕಳ ಪಾಲನಾ ಸಂಸ್ಥೆಗಳ ವಾತಾವರಣದಿಂದ ದೂರವಿಟ್ಟು ಕುಟುಂಬದ ಪ್ರೀತಿ, ಮಮತೆ ಹಾಗೂ ಸುರಕ್ಷತೆಯಲ್ಲಿ ಬೆಳೆಸುವ ಉದ್ದೇಶದಿಂದ ಪ್ರಾಯೋಜಕತ್ವ ಕಾರ್ಯಕ್ರಮ ಜಾರಿಯಲ್ಲಿದೆ. ಈ ಯೋಜನೆಯಡಿ ಅರ್ಹ ಮಗುವಿಗೆ ಮಾಸಿಕ 4,000 ಆರ್ಥಿಕ ನೆರವು ನೀಡಲಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ 503 ಮಕ್ಕಳನ್ನು ಈ ಯೋಜನೆಯಡಿ ಫಲಾನುಭವಿಗಳನ್ನಾಗಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. 2025ರಲ್ಲಿ 1,035 ಮಕ್ಕಳು ಹಾಗೂ 2024ರಲ್ಲಿ 176 ಮಕ್ಕಳು ಈ ಕಾರ್ಯಕ್ರಮದ ಫಲಾನುಭವಿಗಳಾಗಿದ್ದರು ಎಂದು ರಶ್ಮಿ ಅಶೋಕ್ ನೆಕ್ರಾಜೆ ಮಾಹಿತಿ ನೀಡಿದರು. ಮಕ್ಕಳು ಕೋವಿಡ್, ನಿರ್ಲಕ್ಷ್ಯ ಹಾಗೂ ಅಸುರಕ್ಷಿತ ವಾತಾವರಣಕ್ಕೆ ತುತ್ತಾಗದಂತೆ ತಡೆಯುವುದು, ಅವರಿಗೆ ಕುಟುಂಬದ ಪ್ರೀತಿ ಮತ್ತು ಭದ್ರತೆಯನ್ನು ಒದಗಿಸುವುದು ಈ ಯೋಜನೆಗಳ ಮುಖ್ಯ ಉದ್ದೇಶವಾಗಿದೆ. ಅರ್ಹ ಮಕ್ಕಳು ಹಾಗೂ ಕುಟುಂಬಗಳು ಸರ್ಕಾರದ ಸೌಲಭ್ಯಗಳ ಕುರಿತು ಮಾಹಿತಿ ಪಡೆದು ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ಮನವಿ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್. ವಹಿಸಿದ್ದರು. ಜಿಲ್ಲಾ ವಾರ್ತಾಧಿಕಾರಿ ಖಾದರ್ ಶಾ, ಮಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷ ಹರೀಶ್ ರೈ ಹಾಗೂ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀನಿವಾಸ್ ನಾಯಕ್ ಇಂದಾಜೆ ಉಪಸ್ಥಿತರಿದ್ದರು. ಹರೀಶ್ ಮೋಟುಕಾನ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಪುತ್ತೂರಿನ ವಿವೇಕಾನಂದ ಕಾನೂನು ಮಹಾವಿದ್ಯಾಲಯದ ಸಾರಥ್ಯಕ್ಕೆ ಹೊಸ ತಂಡ

ಅಧ್ಯಕ್ಷರಾಗಿ ಕೆ. ವಿಶ್ವಾಸ್ ಶೆಣೈ ಸಂಚಾಲಕರಾಗಿ ನ್ಯಾಯವಾದಿ ಮಹೇಶ್ ಕಜೆ ಹಾಗೂ ಕೋಶಾಧಿಕಾರಿಯಾಗಿ ಸುರೇಶ್ ರೈ ಪಡ್ಡಂಬೈಲು ನೇಮಕ


ಕೆ. ವಿಶ್ವಾಸ್ ಶೆಣೈ


ಮಹೇಶ್ ಕಜೆ


ಸುರೇಶ್ ರೈ ಪಡ್ಡಂಬೈಲ್

ಶಿಕ್ಷಣ, ಸಂಸ್ಕಾರ ಹಾಗೂ ಸಾಮಾಜಿಕ ಬದ್ಧತೆಯ ಮೂಲಕ ಶೈಕ್ಷಣಿಕ ಕ್ಷೇತ್ರದಲ್ಲಿ ಕನ್ನಡದ ಅದ್ಭುತ ಛಾಪು ಮೂಡಿಸಿರುವ ವಿವೇಕಾನಂದ ವಿದ್ಯಾವರ್ಧಕ ಸಂಘದ ಪ್ರತಿಷ್ಠಿತ ಘಟಕ ಸಂಸ್ಥೆಯಾದ ವಿವೇಕಾನಂದ ಕಾನೂನು ಮಹಾವಿದ್ಯಾಲಯದ ಆಡಳಿತ ಚುಕ್ಕಾಣಿ ಇದೀಗ ನೂತನ ತಂಡದ ಕೈ ಸೇರಿದೆ. ಕಾಲೇಜಿನ ನೂತನ ಆಡಳಿತ ಮಂಡಳಿಯ ಪದಾಧಿಕಾರಿಗಳ ಆಯ್ಕೆ ಹಾಗೂ ಜವಾಬ್ದಾರಿ ಹಸ್ತಾಂತರ ಸಮಾರಂಭ ನವೆಂಬರ್ 6ರಂದು ಕಾಲೇಜಿನ ಆಡಳಿತ ಮಂಡಳಿ ಕಚೇರಿಯಲ್ಲಿ ನಡೆಯಿತು. ಉದ್ಯಮಿ ಕೆ. ವಿಶ್ವಾಸ್ ಶೆಣೈ ಅವರು ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಪುತ್ತೂರಿನ ಕಚೇರಿ ಲಾ ಚೇಂಬರ್ಸ್ ಇದರ ಪ್ರಖ್ಯಾತ ನ್ಯಾಯವಾದಿ ಮಹೇಶ್ ಕಜೆ ಸಂಚಾಲಕರಾಗಿ ಹಾಗೂ ನ್ಯಾಯವಾದಿ ಸುರೇಶ್ ರೈ ಪಡ್ಡಂಬೈಲು ಕೋಶಾಧಿಕಾರಿಯಾಗಿ ಜವಾಬ್ದಾರಿ ಸ್ವೀಕರಿಸಿದರು. ನೂತನ ಆಡಳಿತ ಮಂಡಳಿಯ ಸದಸ್ಯರಾಗಿ ಮಹೇಶ್ ಕೆ. ಸವಣೂರು, ಡಾ. ಅರುಣ್ ಶ್ಯಾಮ್, ಮಾಧವ ಪೂಜಾರಿ, ವಿದ್ಯಾಗೌರಿ, ಶೋಭಾ ಕೊಳತ್ತಾಯ ಹಾಗೂ ಸಂತೋಷ್ ರೈ ಕೈಕಾರ ಆಯ್ಕೆ ಯಾಗಿದ್ದಾರೆ. ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು (ರಿ.) ಇದರ ಅಧ್ಯಕ್ಷರಾದ ಕೃಷ್ಣ ಶೆಟ್ಟಿ ಕಡಬ ಹಾಗೂ ಕಾರ್ಯದರ್ಶಿ ವಿಜಯನಾರಾಯಣ ಕೆ.ಎಂ. ಅವರು ನೂತನ ಆಡಳಿತ ಮಂಡಳಿಗೆ ಜವಾಬ್ದಾರಿಗಳನ್ನು ಹಸ್ತಾಂತರಿಸಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಮಾತೃ ಸಂಸ್ಥೆಯ ನಿರ್ದೇಶಕರಾದ ರವೀಂದ್ರ ರೈ, ರಮೇಶ್ಚಂದ್ರ, ಮಹಾಲಕ್ಷ್ಮೀ ಕೆ. ಹಾಗೂ ಕಾಲೇಜಿನ ನಿಕಟಪೂರ್ವ ಆಡಳಿತ ಮಂಡಳಿ ಅಧ್ಯಕ್ಷ ಸುರೇಂದ್ರ ಕಿಣಿ ಜಿ., ಕೋಶಾಧಿಕಾರಿ ಯಶೋಧರ ಜೈನ್ ಮತ್ತು ಸದಸ್ಯರಾದ ಸುರೇಶ್ ರೈ ಪಡ್ಡಂಬೈಲು, ಅರುಣ್ ಬಿ.ಕೆ., ಚೇತನ್ ನಾಯಕ್, ಇಂದುಶೇಖರ್ ಹಾಗೂ ಪ್ರಮಿತಾ ಸಿ. ಹಾಸ್ ಉಪಸ್ಥಿತರಿದ್ದರು. ಮಾತೃ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲಕ್ಷ್ಮೀಪ್ರಸಾದ್ ಬೊಟ್ಯಾಡಿ, ವಿವೇಕಾನಂದ ಕಾನೂನು ಮಹಾವಿದ್ಯಾಲಯದ ಕಾನೂನು ಅಧ್ಯಯನ ವಿಭಾಗದ ನಿರ್ದೇಶಕ ಡಾ. ಬಿ.ಕೆ. ರವೀಂದ್ರ, ಪ್ರಾಂಶುಪಾಲರಾದ ಡಾ. ಅಕ್ಷತಾ ಎ.ಪಿ., ಅಧ್ಯಾಪಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು ನೂತನ ಆಡಳಿತ ಮಂಡಳಿಗೆ ಶುಭ ಹಾರೈಸಿದರು.

ಸಂಸ್ಥೆಯ ಅಭಿವೃದ್ಧಿಗೆ ಸಾಮೂಹಿಕ ಸಂಕಲ್ಪ: ನಿರ್ಗಮಿತ ಆಡಳಿತ ಮಂಡಳಿಯ ಅಧ್ಯಕ್ಷರು ಹಾಗೂ ಸಂಚಾಲಕರು ತಮ್ಮ ಸೇವಾವಧಿಯಲ್ಲಿ ಸಹಕಾರ ನೀಡಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿ, ನೂತನ ತಂಡಕ್ಕೆ ಶುಭ ಹಾರೈಸಿದರು. ಜವಾಬ್ದಾರಿ ಸ್ವೀಕರಿಸಿದ ನೂತನ ಅಧ್ಯಕ್ಷರು ಹಾಗೂ ಸಂಚಾಲಕರು ಸಂಸ್ಥೆಯ ಶೈಕ್ಷಣಿಕ ಗುಣಮಟ್ಟ, ಅಭಿವೃದ್ಧಿ ಹಾಗೂ ಪ್ರಗತಿಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸುವ ಅಗತ್ಯವನ್ನು ಒತ್ತಿಹೇಳಿದರು. ಮುಂದಿನ ದಿನಗಳಲ್ಲಿ ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಗೆ ಎಲ್ಲರ ಸಹಕಾರ ಮತ್ತು ಬೆಂಬಲವನ್ನು ಕೋರಿದರು. ಹೊಸ ಜವಾಬ್ದಾರಿಯೊಂದಿಗೆ ಕಾರ್ಯಪ್ರವೃತ್ತವಾಗಿರುವ ನೂತನ ಆಡಳಿತ ಮಂಡಳಿಯು ವಿವೇಕಾನಂದ ಕಾನೂನು ಮಹಾವಿದ್ಯಾಲಯದ ಶೈಕ್ಷಣಿಕ ಪರಂಪರೆಯನ್ನು ಮತ್ತಷ್ಟು ಬಲಪಡಿಸಿ, ಕಾನೂನು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಸಾಧನೆಗಳತ್ತ ಮುನ್ನಡೆಯಲಿ ಎಂಬ ಆಶಯ ಈ ಸಂದರ್ಭದಲ್ಲಿ ವ್ಯಕ್ತವಾಯಿತು.

ಕೃಷಿ-ತೋಟಗಾರಿಕೆ ಪದವಿ ಪ್ರವೇಶಕ್ಕೆ ನವಂಬರ್ 24ರಂದು ಮುಕ್ತ ಕೌನ್ಸೆಲಿಂಗ್

ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ 2026-27ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿ ಕಾರ್ಯಕ್ರಮಗಳ ಖಾಲಿ ಉಳಿದಿರುವ ಸೀಟುಗಳನ್ನು ಭರ್ತಿ ಮಾಡಲು ನವೆಂಬರ್ 24ರಂದು ಮುಕ್ತ ಕೌನ್ಸೆಲಿಂಗ್ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಯುಜಿ ಲ್ಯಾಟರಲ್ ಎಂಟ್ರಿ ಕೋಟಾದಡಿ ಅಂತಿಮ ಸುತ್ತಿನ ಪ್ರವೇಶಾತಿ ಪ್ರಕ್ರಿಯೆ ಪೂರ್ಣಗೊಂಡ ಬಳಿಕವೂ ಭರ್ತಿಯಾಗದೆ ಉಳಿದಿರುವ ಪ್ರವರ್ಗವಾರು ಸೀಟುಗಳನ್ನು ಈ ಮೂಲಕ ಭರ್ತಿ ಮಾಡಲಾಗುತ್ತದೆ. ಪ್ರವೇಶಾತಿ ಬಯಸುವ ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣ https://careers.bhel.inದಿಂದ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಬೇಕು. ಅಗತ್ಯ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ, ನವೆಂಬರ್ 24ರ ಬೆಳಿಗ್ಗೆ 11 ಗಂಟೆಯೊಳಗೆ ಕುಲಸಚಿವರ ಕಾರ್ಯಾಲಯ, ಶರಾವತಿ ಆಡಳಿತ ಭವನ, ಎರಡನೇ ಮಹಡಿ, ಇರುವಕ್ಕಿ- 577412, ಶಿವಮೊಗ್ಗ ಜಿಲ್ಲೆ ಇಲ್ಲಿಗೆ ಖುದ್ದಾಗಿ ಸಲ್ಲಿಸಬೇಕು. ನಿಗದಿತ ಸಮಯದ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಮುಕ್ತ ಕೌನ್ಸೆಲಿಂಗ್ ಆಯ್ಕೆ ಪ್ರಕ್ರಿಯೆಯು ವಿಶ್ವವಿದ್ಯಾಲಯದ ಇರುವಕ್ಕಿ ಮುಖ್ಯ ಆವರಣದಲ್ಲಿ ನಡೆಯಲಿದೆ. ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಸ್ನಾತಕ ಪದವಿಗಳಿಗಾಗಿ ನಡೆಸಿದ ಯುಜಿ ಲ್ಯಾಟರಲ್ ಎಂಟ್ರಿ – 2026 ಪ್ರವೇಶ ಪರೀಕ್ಷೆಯಲ್ಲಿ ಭಾಗವಹಿಸಿ ರ್‍ಯಾಂಕ್ ಪಡೆದ ಅಭ್ಯರ್ಥಿಗಳು ಮಾತ್ರ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅರ್ಹರಾಗಿರುತ್ತಾರೆ. ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪಡೆಯಬಹುದು ಎಂದು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಆರೋಪ; ಕಾನೂನು ಹೋರಾಟದ ಎಚ್ಚರಿಕೆ - ಶ್ರೀನಿವಾಸ ರಾವ್



ಶ್ರದ್ಧೆ, ಭಕ್ತಿ, ಧಾರ್ಮಿಕ ಸಾಮರಸ್ಯ ಹಾಗೂ ಮಾನವೀಯ ಸೇವೆಯ ಮೂಲಕ ವಿಶ್ವದ ಗಮನ ಸೆಳೆದಿರುವ ಧರ್ಮಸ್ಥಳ ಕ್ಷೇತ್ರದ ಘನತೆಗೆ ಧಕ್ಕೆ ತರುವ ಪ್ರಯತ್ನಗಳು ನಡೆಯುತ್ತಿವೆ ಎಂಬ ಆರೋಪದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಒಗ್ಗಟ್ಟಿನ ಧ್ವನಿ ಎತ್ತಿದ್ದಾರೆ. ಧರ್ಮಸ್ಥಳ ಗ್ರಾಮಕ್ಕೂ ದೇವಸ್ಥಾನಕ್ಕೂ ಅವಿನಾಭಾವ ಸಂಬಂಧವಿದ್ದು, ಇಲ್ಲಿ ಹಿಂದೂಗಳು, ಜೈನರು, ಮುಸ್ಲಿಮರು ಹಾಗೂ ಕ್ರೈಸ್ತರು ಸೇರಿದಂತೆ ಸರ್ವಧರ್ಮೀಯರು ಪರಸ್ಪರ ಗೌರವ, ಶಾಂತಿ ಮತ್ತು ಸೌಹಾರ್ದದಿಂದ ಬದುಕುತ್ತಿದ್ದಾರೆ. ಇಂತಹ ಪವಿತ್ರ ಕ್ಷೇತ್ರದ ಕುರಿತು ಅಪಪ್ರಚಾರ ಮಾಡುವ ಪ್ರಯತ್ನಗಳನ್ನು ಖಂಡಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಧರ್ಮಸ್ಥಳದ ಕುರಿತು ನಡೆಯುತ್ತಿದೆ ಎನ್ನಲಾದ ಅಪಪ್ರಚಾರ ಹಾಗೂ ಷಡ್ಯಂತ್ರವನ್ನು ಖಂಡಿಸಿ ಇಂದು ನವಂಬರ್ 14ರಂದು ಶನಿವಾರ ಧರ್ಮಸ್ಥಳದ ಮಹೋತ್ಸವ ಸಭಾಭವನದಲ್ಲಿ ನಡೆದ ಊರಿನ ನಾಗರಿಕರ ಸಮಾಲೋಚನಾ ಸಭೆಯಲ್ಲ

ಚರ್ಮದ ಕಿರಿಕಿರಿ: ಕಾರಣ ತಿಳಿದು ಆರೈಕೆ ಮಾಡಿ



ತುರಿಕೆ, ಕೆಂಪಾಗುವಿಕೆ, ಉರಿ, ಸಣ್ಣ ಗುಳ್ಳೆಗಳು ಕೇವಲ ಸೌಂದರ್ಯ ಸಮಸ್ಯೆಯಲ್ಲ; ಅಲರ್ಜಿ, ಸೋಂಕು ಅಥವಾ ಚರ್ಮದ ಇತರ ಸಮಸ್ಯೆಗಳ ಸೂಚನೆಯೂ ಆಗಿರಬಹುದು. ನಮ್ಮ ದೇಹದ ಅತಿ ದೊಡ್ಡ ಅಂಗವಾಗಿರುವ ಚರ್ಮವು ಬಾಹ್ಯ ಪರಿಸರದ ಧೂಳು, ಮಾಲಿನ್ಯ, ಸೂಕ್ಷ್ಮಜೀವಿಗಳು ಮತ್ತು ರಾಸಾಯನಿಕ ವಸ್ತುಗಳಿಂದ ದೇಹವನ್ನು ರಕ್ಷಿಸುವ ಪ್ರಮುಖ ಕವಚವಾಗಿದೆ. ದೇಹದ ಉಷ್ಣತೆಯನ್ನು ನಿಯಂತ್ರಿಸುವುದು, ಸ್ಪರ್ಶದ ಅನುಭವ ನೀಡುವುದು ಹಾಗೂ ತೇವಾಂಶದ ಸಮತೋಲನ ಕಾಪಾಡುವುದರಲ್ಲಿಯೂ ಚರ್ಮ ಮಹತ್ತರ ಪಾತ್ರ ವಹಿಸುತ್ತದೆ. ಆದರೆ ಬದಲಾಗುತ್ತಿರುವ ಜೀವನಶೈಲಿ, ಪರಿಸರ ಮಾಲಿನ್ಯ, ಅಲರ್ಜಿಕಾರಕ ವಸ್ತುಗಳು ಮತ್ತು ಕೆಲವು ಆರೋಗ್ಯ ಸಮಸ್ಯೆಗಳಿಂದ ಚರ್ಮದಲ್ಲಿ ನಾನಾ ರೀತಿಯ ಕಿರಿಕಿರಿಗಳು ಕಾಣಿಸಿಕೊಳ್ಳುತ್ತವೆ. ತುರಿಕೆ, ಚರ್ಮ ಕೆಂಪಾಗುವುದು, ಉರಿ, ಸಣ್ಣ ಗುಳ್ಳೆಗಳು, ಒಣಗುವಿಕೆ, ಬಿರುಕು ಬಿಡುವುದು ಅಥವಾ ಚರ್ಮ ದಪ್ಪವಾಗುವುದು ಇಂತಹ ಸಮಸ್ಯೆಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಕೆಲವರು ಇವುಗಳನ್ನು ಸಣ್ಣಪುಟ್ಟ ತೊಂದರೆಗಳೆಂದು ನಿರ್ಲಕ್ಷಿಸಿದರೆ, ಇನ್ನು ಕೆಲವರು ವೈದ್ಯರ ಸಲಹೆಯಿಲ್ಲದೆ ವಿವಿಧ ಕ್ರೀಮ್‌ಗಳನ್ನು ಬಳಸುತ್ತಾರೆ. ಆದರೆ ಚರ್ಮದ ಸಮಸ್ಯೆಗೆ ನಿಖರವಾದ ಕಾರಣ ತಿಳಿದು ಸೂಕ್ತ ಚಿಕಿತ್ಸೆ ಪಡೆಯುವುದು ಅತ್ಯಂತ ಅಗತ್ಯ.

ಚರ್ಮದ ಕಿರಿಕಿರಿಗೆ ಕಾರಣಗಳೇನು?

ಹೊಸ ಸಾಬೂನು, ಶ್ಯಾಂಪೂ, ಡಿಟರ್ಜೆಂಟ್, ಮುಖಕ್ಕೆ ಹಚ್ಚುವ ಕ್ರೀಮ್, ಸುಗಂಧ ದ್ರವ್ಯ, ಹೇರ್ ಡೈ ಮತ್ತು ಸೌಂದರ್ಯವರ್ಧಕಗಳಲ್ಲಿರುವ ಕೆಲವು ರಾಸಾಯನಿಕಗಳು ಚರ್ಮದಲ್ಲಿ ಅಲರ್ಜಿ ಉಂಟುಮಾಡಬಹುದು. ಕೆಲವು ಆಭರಣಗಳಲ್ಲಿರುವ ನಿಕ್ಕಲ್ ಲೋಹವೂ ಸೂಕ್ಷ್ಮ ಚರ್ಮ ಹೊಂದಿರುವವರಲ್ಲಿ ಅಲರ್ಜಿಗೆ ಕಾರಣವಾಗುತ್ತದೆ. ಅದೇ ರೀತಿ, ಧೂಳು, ವಾಯುಮಾಲಿನ್ಯ, ಅತಿಯಾದ ಬಿಸಿಲು, ಬೆವರು ಮತ್ತು ತೇವಾಂಶದಿಂದಲೂ ಚರ್ಮದ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಚರ್ಮಕ್ಕೆ ಹೊಂದಿಕೆಯಾಗದ ಬಟ್ಟೆ ಧರಿಸುವುದು, ಬಿಗಿಯಾದ ಉಡುಪು, ತೇವವಾಗಿರುವ ಬಟ್ಟೆಗಳನ್ನು ದೀರ್ಘಕಾಲ ಧರಿಸುವುದು ಮತ್ತು ವೈಯಕ್ತಿಕ ಸ್ವಚ್ಛತೆಯ ಕೊರತೆಯೂ ಕೆಲವು ಸಮಸ್ಯೆಗಳಿಗೆ ಕಾರಣವಾಗಬಹುದು. ಕೆಲವು ವಸ್ತುಗಳು ಚರ್ಮಕ್ಕೆ ತಾಗಿದಾಗ ಉಂಟಾಗುವ ಅಲರ್ಜಿಯನ್ನು 'ಕಾಂಟ್ಯಾಕ್ಟ್ ಡರ್ಮಟೈಟಿಸ್' ಎಂದು ಕರೆಯಲಾಗುತ್ತದೆ. ಇದರಿಂದ ತುರಿಕೆ, ಕೆಂಪಾಗುವಿಕೆ, ಉರಿ, ಊತ ಮತ್ತು ಕೆಲವೊಮ್ಮೆ ನೀರು ತುಂಬಿದ ಸಣ್ಣ ಗುಳ್ಳೆಗಳು ಕಾಣಿಸಿಕೊಳ್ಳಬಹುದು.

ಹವಾಮಾನ ಬದಲಾವಣೆಯೂ ಚರ್ಮದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ: ಬೇಸಿಗೆಯಲ್ಲಿ ಅತಿಯಾದ ಬೆವರು, ಬಿಸಿಲು ಮತ್ತು ಧೂಳಿನಿಂದ ಚರ್ಮದಲ್ಲಿ ತುರಿಕೆ, ಬೆವರುಗುಳ್ಳೆಗಳು ಹಾಗೂ ಉರಿ ಉಂಟಾಗಬಹುದು. ಮಳೆಗಾಲದಲ್ಲಿ ಹೆಚ್ಚುವ ತೇವಾಂಶದಿಂದ ಶಿಲೀಂಧ್ರಗಳ ಬೆಳವಣಿಗೆಗೆ ಅನುಕೂಲಕರ ವಾತಾವರಣ ನಿರ್ಮಾಣವಾಗುತ್ತದೆ. ವಿಶೇಷವಾಗಿ ಕಂಕುಳು, ತೊಡೆಗಳ ಸಂಧಿ, ಪಾದಗಳ ಬೆರಳುಗಳ ನಡುವಿನ ಭಾಗಗಳಲ್ಲಿ ಶಿಲೀಂಧ್ರ ಸೋಂಕು ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ. ಚಳಿಗಾಲದಲ್ಲಿ ವಾತಾವರಣದ ತೇವಾಂಶ ಕಡಿಮೆಯಾಗುವುದರಿಂದ ಚರ್ಮ ಒಣಗುವುದು, ಬಿರುಕು ಬಿಡುವುದು ಮತ್ತು ತುರಿಕೆ ಉಂಟಾಗಬಹುದು. ಅತಿಯಾದ ಬಿಸಿನೀರಿನಿಂದ ಸ್ನಾನ ಮಾಡುವುದು ಈ ಸಮಸ್ಯೆಯನ್ನು ಮತ್ತಷ್ಟು ಹೆಚ್ಚಿಸಬಹುದು. ಆದ್ದರಿಂದ ಋತುಮಾನಕ್ಕೆ ಅನುಗುಣವಾಗಿ ಚರ್ಮದ ಆರೈಕೆ ಮಾಡುವುದು ಮುಖ್ಯ.

ಆಹಾರ, ನಿದ್ರೆ ಮತ್ತು ಮಾನಸಿಕ ಒತ್ತಡದ ಪಾತ್ರ : ಕೆಲವು ನಿರ್ದಿಷ್ಟ ಆಹಾರ ಪದಾರ್ಥಗಳು ಕೆಲವರಲ್ಲಿ ಅಲರ್ಜಿಯ ಪ್ರತಿಕ್ರಿಯೆ ಉಂಟುಮಾಡಬಹುದು. ಹಾಲು, ಮೊಟ್ಟೆ, ಸಮುದ್ರಾಹಾರ, ಕಡಲೆಕಾಯಿ ಸೇರಿದಂತೆ ಕೆಲವು ಆಹಾರಗಳು ಅಲರ್ಜಿ ಇರುವ ವ್ಯಕ್ತಿಗಳಲ್ಲಿ ತುರಿಕೆ, ದದ್ದು ಅಥವಾ ಊತಕ್ಕೆ ಕಾರಣವಾಗಬಹುದು. ಆದರೆ ಎಲ್ಲರಿಗೂ ಒಂದೇ ರೀತಿಯ ಆಹಾರದಿಂದ ಚರ್ಮದ ಸಮಸ್ಯೆ ಉಂಟಾಗುವುದಿಲ್ಲ. ಹೀಗಾಗಿ ಯಾವುದೇ ವೈಜ್ಞಾನಿಕ ಕಾರಣವಿಲ್ಲದೆ ಅನೇಕ ಆಹಾರ ಪದಾರ್ಥಗಳನ್ನು ಸೇವಿಸುವುದನ್ನು ನಿಲ್ಲಿಸುವುದು ಸೂಕ್ತವಲ್ಲ. ನಿದ್ರೆಯ ಕೊರತೆ, ನಿರಂತರ ಮಾನಸಿಕ ಒತ್ತಡ ಮತ್ತು ಕೆಲವು ಹಾರ್ಮೋನ್ ಬದಲಾವಣೆಗಳು ಚರ್ಮದ ಸಮಸ್ಯೆಗಳನ್ನು ಉಲ್ಬಣಗೊಳಿಸಬಹುದು. ಈಗಾಗಲೇ ಎಕ್ಸಿಮಾ ಅಥವಾ ಸೋರಿಯಾಸಿಸ್‌ನಂತಹ ಚರ್ಮದ ಕಾಯಿಲೆ ಇರುವವರಲ್ಲಿ ಒತ್ತಡದಿಂದ ಲಕ್ಷಣಗಳು ಹೆಚ್ಚಾಗುವ ಸಾಧ್ಯತೆಯೂ ಇದೆ. ಕೆಲವು ಔಷಧಿಗಳ ಅಡ್ಡಪರಿಣಾಮವಾಗಿಯೂ ಚರ್ಮದ ಮೇಲೆ ದದ್ದು ಅಥವಾ ತುರಿಕೆ ಕಾಣಿಸಿಕೊಳ್ಳಬಹುದು. ಇಂತಹ ಸಂದರ್ಭಗಳಲ್ಲಿ ವೈದ್ಯರ ಸಲಹೆ ಪಡೆಯಬೇಕು.

ಆಯುರ್ವೇದದ ದೃಷ್ಟಿಯಲ್ಲಿ ಚರ್ಮದ ಸಮಸ್ಯೆಗಳು: ಆಯುರ್ವೇದದಲ್ಲಿ ಚರ್ಮಕ್ಕೆ ಸಂಬಂಧಿಸಿದ ಹಲವು ಕಾಯಿಲೆಗಳನ್ನು 'ತ್ವಕ್ ವಿಕಾರ' ಅಥವಾ ಕುಷ್ಠಾದಿ ಚರ್ಮವ್ಯಾಧಿಗಳ ವರ್ಗದಲ್ಲಿ ವಿವರಿಸಲಾಗಿದೆ. ವಾತ, ಪಿತ್ತ ಮತ್ತು ಕಫ ದೋಷಗಳ ಅಸಮತೋಲನ ಹಾಗೂ ರಕ್ತದ ದುಷ್ಟಿಯನ್ನು ಕೆಲವು ಚರ್ಮ ಸಮಸ್ಯೆಗಳ ಆಯುರ್ವೇದೀಯ ವಿವರಣೆಗಳಲ್ಲಿ ಉಲ್ಲೇಖಿಸಲಾಗುತ್ತದೆ. ಪಿತ್ತದ ಹೆಚ್ಚಳವನ್ನು ಉರಿ ಮತ್ತು ಕೆಂಪಾಗುವಿಕೆಗೆ, ಕಫವನ್ನು ತುರಿಕೆ ಮತ್ತು ತೇವಾಂಶಕ್ಕೆ, ವಾತವನ್ನು ಒಣಗುವಿಕೆ ಮತ್ತು ಒರಟುತನಕ್ಕೆ ಸಂಬಂಧಿಸಿ ವಿವರಿಸಲಾಗುತ್ತದೆ. ಆದರೆ ಚರ್ಮದ ಸಮಸ್ಯೆಗಳಿಗೆ ಅಲರ್ಜಿ, ಶಿಲೀಂಧ್ರ ಅಥವಾ ಬ್ಯಾಕ್ಟೀರಿಯಾ ಸೋಂಕು, ಎಕ್ಸಿಮಾ, ಸೋರಿಯಾಸಿಸ್ ಸೇರಿದಂತೆ ಹಲವು ವೈದ್ಯಕೀಯ ಕಾರಣಗಳಿರಬಹುದು. ಆದ್ದರಿಂದ ಆಯುರ್ವೇದೀಯ ವಿವರಣೆಯೊಂದನ್ನೇ ಆಧರಿಸಿ ಸ್ವಯಂ ಚಿಕಿತ್ಸೆ ಮಾಡಿಕೊಳ್ಳದೆ, ಸಮಸ್ಯೆಯ ನಿಖರ ಕಾರಣವನ್ನು ಪತ್ತೆಹಚ್ಚುವುದು ಮುಖ್ಯ.

ಚರ್ಮದ ಕಿರಿಕಿರಿ ಕಡಿಮೆ ಮಾಡಲು ಅನುಸರಿಸಬೇಕಾದ ಕ್ರಮಗಳು : ಚರ್ಮದ ಆರೋಗ್ಯ ಕಾಪಾಡಲು ದುಬಾರಿ ಸೌಂದರ್ಯವರ್ಧಕಗಳಿಗಿಂತ ಸರಳವಾದ ದೈನಂದಿನ ಆರೈಕೆ ಹೆಚ್ಚು ಮುಖ್ಯ. ಕೆಲವು ಮುನ್ನೆಚ್ಚರಿಕೆಗಳು ಚರ್ಮದ ಕಿರಿಕಿರಿಯನ್ನು ತಡೆಗಟ್ಟಲು ನೆರವಾಗಬಹುದು.

ಸ್ವಚ್ಛತೆಗೆ ಆದ್ಯತೆ ನೀಡಿ: ಚರ್ಮವನ್ನು ಸ್ವಚ್ಛವಾಗಿಡಿ. ಅತಿಯಾದ ಸಾಬೂನು ಬಳಕೆ ಮತ್ತು ಬಲವಾಗಿ ಉಜ್ಜುವುದನ್ನು ತಪ್ಪಿಸಿ. ಸೌಮ್ಯವಾದ, ಸುಗಂಧರಹಿತ ಕ್ಲೆನ್ಸರ್ ಬಳಸುವುದು ಉತ್ತಮ.

ಚರ್ಮದ ತೇವಾಂಶ ಕಾಪಾಡಿ: ಸ್ನಾನದ ನಂತರ ಚರ್ಮ ಸ್ವಲ್ಪ ತೇವವಾಗಿರುವಾಗಲೇ ಸುಗಂಧರಹಿತ ಮಾಯಿಶ್ಚರೈಸರ್ ಹಚ್ಚಿ. ಒಣ ಚರ್ಮದ ಸಮಸ್ಯೆ ಕಡಿಮೆಯಾಗಲು ಇದು ನೆರವಾಗುತ್ತದೆ.

ಸರಿಯಾದ ಬಟ್ಟೆ ಧರಿಸಿ: ಸಡಿಲವಾದ, ಗಾಳಿಯಾಡುವ ಹತ್ತಿ ಬಟ್ಟೆಗಳನ್ನು ಆಯ್ಕೆಮಾಡಿ. ಬೆವರಿನಿಂದ ಒದ್ದೆಯಾದ ಬಟ್ಟೆಗಳನ್ನು ಬದಲಾಯಿಸಿ. ಹೊಸ ಬಟ್ಟೆಗಳನ್ನು ತೊಳೆದು ಧರಿಸುವುದು ಉತ್ತಮ.

ವೈಯಕ್ತಿಕ ವಸ್ತುಗಳನ್ನು ಹಂಚಿಕೊಳ್ಳಬೇಡಿ: ಟವೆಲ್, ಬಟ್ಟೆ, ಸಾಕ್ಸ್ ಮತ್ತು ಇತರ ವೈಯಕ್ತಿಕ ವಸ್ತುಗಳನ್ನು ಹಂಚಿಕೊಳ್ಳುವುದನ್ನು ತಪ್ಪಿಸಿ. ಇದರಿಂದ ಕೆಲವು ಸೋಂಕುಗಳ ಹರಡುವಿಕೆಯನ್ನು ತಡೆಯಬಹುದು.

ಬಿಸಿನೀರಿನ ಸ್ನಾನ ತಪ್ಪಿಸಿ: ಅತಿಯಾದ ಬಿಸಿನೀರು ಚರ್ಮದ ಸಹಜ ತೇವಾಂಶವನ್ನು ಕಡಿಮೆ ಮಾಡಬಹುದು. ಉಗುರುಬೆಚ್ಚಗಿನ ನೀರಿನಲ್ಲಿ ಸ್ನಾನ ಮಾಡಿ.

ಜಿಸಿಲಿನಿಂದ ರಕ್ಷಿಸಿಕೊಳ್ಳಿ: ಹೊರಗೆ ಹೋಗುವಾಗ ಸೂಕ್ತ ಸೂರ್ಯರಕ್ಷಣಾ ಕ್ರಮಗಳನ್ನು ಅನುಸರಿಸಿ. ಚರ್ಮಕ್ಕೆ ಹೊಂದುವ ಸನ್‌ಸ್ಕ್ರೀನ್ ಬಳಸಬಹುದು.

ಆಹಾರದಲ್ಲಿ ಸಮತೋಲನ ಇರಲಿ: ತರಕಾರಿ, ಹಣ್ಣುಗಳು ಮತ್ತು ಪೌಷ್ಟಿಕ ಆಹಾರ ಸೇವಿಸಿ. ದೇಹಕ್ಕೆ ಅಗತ್ಯವಾದಷ್ಟು ನೀರು ಕುಡಿಯಿರಿ. ಯಾವುದೇ ಆಹಾರದಿಂದ ಅಲರ್ಜಿ ಉಂಟಾಗುತ್ತದೆ ಎಂಬುದು ದೃಢಪಟ್ಟಿದ್ದರೆ ಅದನ್ನು ತಪ್ಪಿಸಿ.

ಮನೆಮದ್ದುಗಳ ಬಳಕೆಯಲ್ಲಿ ಎಚ್ಚರಿಕೆ ಅಗತ್ಯ : ಚರ್ಮದಲ್ಲಿ ತುರಿಕೆ ಅಥವಾ ಉರಿ ಕಾಣಿಸಿಕೊಂಡ ತಕ್ಷಣ ಅರಿಶಿನ, ಕರ್ಪೂರ, ನಿಂಬೆಹಣ್ಣು, ವಿವಿಧ ಎಣ್ಣೆಗಳು ಅಥವಾ ಮನೆಯಲ್ಲಿರುವ ಮಿಶ್ರಣಗಳನ್ನು ಹಚ್ಚುವುದು ಎಲ್ಲ ಸಂದರ್ಭಗಳಲ್ಲೂ ಸುರಕ್ಷಿತವಲ್ಲ. ಇವು ಕೆಲವರಲ್ಲಿ ಅಲರ್ಜಿಯನ್ನು ಹೆಚ್ಚಿಸಬಹುದು ಅಥವಾ ಈಗಾಗಲೇ ಉರಿಯುತ್ತಿರುವ ಚರ್ಮಕ್ಕೆ ಮತ್ತಷ್ಟು ಕಿರಿಕಿರಿ ಉಂಟುಮಾಡಬಹುದು. ತುರಿಕೆ ಇರುವ ಜಾಗವನ್ನು ತಣ್ಣನೆಯ ಒದ್ದೆ ಬಟ್ಟೆಯಿಂದ ಸ್ವಲ್ಪ ಹೊತ್ತು ಮೃದುವಾಗಿ ಒತ್ತಿಕೊಳ್ಳುವುದರಿಂದ ತಾತ್ಕಾಲಿಕ ಆರಾಮ ಸಿಗಬಹುದು. ಆದರೆ ತೆರೆದ ಗಾಯ, ಸೋಂಕು ಅಥವಾ ಗುಳ್ಳೆಗಳಿರುವ ಜಾಗದಲ್ಲಿ ವೈದ್ಯರ ಸಲಹೆಯಿಲ್ಲದೆ ಯಾವುದೇ ವಸ್ತುವನ್ನು ಹಚ್ಚಬಾರದು. ಬೇವು ಅಥವಾ ಹೊಂಗೆ ಎಲೆ ಹಾಕಿದ ನೀರಿನಲ್ಲಿ ಸ್ನಾನ ಮಾಡುವುದರಿಂದ ಎಲ್ಲ ರೀತಿಯ ಚರ್ಮರೋಗಗಳು ಗುಣವಾಗುತ್ತವೆ ಎಂಬುದಕ್ಕೂ ದೃಢವಾದ ವೈದ್ಯಕೀಯ ಪುರಾವೆಗಳಿಲ್ಲ.

ಸ್ಟಿರಾಯ್ಡ್ ಕ್ರೀಮ್ ಬಳಕೆಯಲ್ಲಿ ಎಚ್ಚರ: ಚರ್ಮದ ತುರಿಕೆ ಮತ್ತು ಕೆಂಪಾಗುವಿಕೆಗೆ ತಕ್ಷಣ ಪರಿಹಾರ ಸಿಗುತ್ತದೆ ಎಂಬ ಕಾರಣಕ್ಕೆ ಕೆಲವರು ವೈದ್ಯರ ಸಲಹೆಯಿಲ್ಲದೆ ಸ್ಟಿರಾಯ್ಡ್ ಕ್ರೀಮ್‌ಗಳನ್ನು ಬಳಸುತ್ತಾರೆ. ಆದರೆ ತಪ್ಪಾದ ಕ್ರೀಮ್, ತಪ್ಪಾದ ಪ್ರಮಾಣ ಅಥವಾ ದೀರ್ಘಕಾಲದ ಬಳಕೆಯಿಂದ ಚರ್ಮ ತೆಳುವಾಗುವುದು, ಬಣ್ಣ ಬದಲಾಗುವುದು ಮತ್ತು ಸೋಂಕು ಉಲ್ಬಣಗೊಳ್ಳುವಂತಹ ಅಡ್ಡಪರಿಣಾಮಗಳು ಉಂಟಾಗಬಹುದು. ವಿಶೇಷವಾಗಿ ಶಿಲೀಂಧ್ರ ಸೋಂಕಿಗೆ ಸ್ಟಿರಾಯ್ಡ್ ಮಿಶ್ರಿತ ಕ್ರೀಮ್ ಬಳಸುವುದರಿಂದ ಸಮಸ್ಯೆ ಮತ್ತಷ್ಟು ಗಂಭೀರವಾಗಬಹುದು. ಹೀಗಾಗಿ ವೈದ್ಯರ ಸಲಹೆಯಿಲ್ಲದೆ ಇಂತಹ ಕ್ರೀಮ್‌ಗಳನ್ನು ಬಳಸಬಾರದು.

ಯಾವಾಗ ವೈದ್ಯರನ್ನು ಸಂಪರ್ಕಿಸಬೇಕು?

ಚರ್ಮದ ಕಿರಿಕಿರಿ ಎರಡು-ಮೂರು ದಿನಗಳಲ್ಲಿ ಕಡಿಮೆಯಾಗದಿದ್ದರೆ, ಪದೇಪದೇ ಮರುಕಳಿಸಿದರೆ ಅಥವಾ ದೇಹದ ಇತರ ಭಾಗಗಳಿಗೂ ಹರಡಿದರೆ ಚರ್ಮರೋಗ ತಜ್ಞರನ್ನು ಸಂಪರ್ಕಿಸಬೇಕು. ಕೀವು ತುಂಬಿದ ಗುಳ್ಳೆಗಳು, ತೀವ್ರ ನೋವು, ಜ್ವರ ಅಥವಾ ಚರ್ಮದಲ್ಲಿ ವೇಗವಾಗಿ ಹರಡುವ ಕೆಂಪು ಕಾಣಿಸಿಕೊಂಡರೂ ತಕ್ಷಣ ವೈದ್ಯಕೀಯ ನೆರವು ಪಡೆಯಬೇಕು. ಚರ್ಮದ ದದ್ದಿನ ಜೊತೆಗೆ ತುಟಿ, ನಾಲಿಗೆ ಅಥವಾ ಗಂಟಲು ಊದಿಕೊಳ್ಳುವುದು, ಉಸಿರಾಟದ ತೊಂದರೆ ಕಾಣಿಸಿಕೊಂಡರೆ ಅದು ತೀವ್ರ ಅಲರ್ಜಿಯ ಲಕ್ಷಣವಾಗಿರಬಹುದು. ಇಂತಹ ಸಂದರ್ಭದಲ್ಲಿ ತುರ್ತು ವೈದ್ಯಕೀಯ ಚಿಕಿತ್ಸೆ ಪಡೆಯುವುದು ಅತ್ಯಗತ್ಯ.

ಆರೋಗ್ಯಕರ ಚರ್ಮಕ್ಕೆ ಸರಿಯಾದ ಆರೈಕೆಯೇ ಮದ್ದು : ಚರ್ಮದ ಕಿರಿಕಿರಿಯನ್ನು ಕೇವಲ ಸೌಂದರ್ಯದ ಸಮಸ್ಯೆ ಎಂದು ಭಾವಿಸಿ ನಿರ್ಲಕ್ಷಿಸಬಾರದು. ಪ್ರತಿಯೊಂದು ತುರಿಕೆಯೂ ಅಲರ್ಜಿಯ ಲಕ್ಷಣವಾಗಿರುವುದಿಲ್ಲ; ಹಾಗೆಯೇ ಪ್ರತಿಯೊಂದು ದದ್ದಿಗೂ ಒಂದೇ ರೀತಿಯ ಚಿಕಿತ್ಸೆ ಇರುವುದಿಲ್ಲ. ಸಮಸ್ಯೆಯ ಮೂಲ ಕಾರಣವನ್ನು ಪತ್ತೆಹಚ್ಚಿ ಅದಕ್ಕೆ ತಕ್ಕಂತೆ ಚಿಕಿತ್ಸೆ ಪಡೆಯುವುದು ಮುಖ್ಯ. ಸ್ವಚ್ಛತೆ, ಸಮತೋಲಿತ ಆಹಾರ, ಉತ್ತಮ ನಿದ್ರೆ, ಮಾನಸಿಕ ಒತ್ತಡ ನಿಯಂತ್ರಣ ಮತ್ತು ಸೂಕ್ತ ಚರ್ಮದ ಆರೈಕೆಯ ಮೂಲಕ ಅನೇಕ ಸಮಸ್ಯೆಗಳನ್ನು ತಡೆಗಟ್ಟಬಹುದು. ತುರಿಕೆ ಅಥವಾ ಉರಿ ಕಾಣಿಸಿಕೊಂಡಾಗ ಸ್ವಯಂ ಚಿಕಿತ್ಸೆ ಮಾಡಿಕೊಳ್ಳುವ ಬದಲು ತಜ್ಞರ ಸಲಹೆ ಪಡೆಯುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಚರ್ಮದ ಆರೋಗ್ಯ ಕಾಪಾಡುವುದು ಕೇವಲ ಸೌಂದರ್ಯಕ್ಕಾಗಿ ಅಲ್ಲ; ಒಟ್ಟಾರೆ ಆರೋಗ್ಯ ಮತ್ತು ಜೀವನದ ಗುಣಮಟ್ಟಕ್ಕಾಗಿ ಕೂಡ ಅತ್ಯಗತ್ಯ. ಚರ್ಮದ ಸಮಸ್ಯೆಗಳಿಗೆ ಸೂಕ್ತ ಸಲಹೆ ಮತ್ತು ಚಿಕಿತ್ಸೆಗಾಗಿ ಅರ್ಹ ವೈದ್ಯರನ್ನು ಸಂಪರ್ಕಿಸಿ.

ನಾನು ಇದನ್ನು ಮಾಡಬಲ್ಲೆ!



ನನ್ನಿಂದ ಆಗೋದಿಲ್ಲ, ಇದು ಅಸಾಧ್ಯ ಅನ್ನುವ ಮನೋಭಾವವೇ ನಮ್ಮ ಮತ್ತು ಯಶಸ್ಸಿನ ನಡುವೆ ಇರುವ ದೊಡ್ಡ ತಡೆಗೋಡೆ. ಪ್ರತಿಯೊಬ್ಬ ಮನುಷ್ಯನ ಕನಸುಗಳು ಭಿನ್ನ. ಆದರೆ ಪ್ರತಿಯೊಬ್ಬನ ಸಾಮರ್ಥ್ಯದಲ್ಲಿ ವ್ಯತ್ಯಾಸ ಇರೋದಿಲ್ಲ. ಆದರೆ ಆ ಸಾಮರ್ಥ್ಯವನ್ನು ಬಳಸಿಕೊಳ್ಳುವುದರ ಮೇಲೆ ಅತನ ಅಥವಾ ಆಕೆಯ ಗೆಲುವು ಅಡಕವಾಗಿರುತ್ತೆ. ಮುಖ್ಯವಾಗಿ ಬೇಕಾಗಿರೋದು "ನಾನು ಇದನ್ನು ಮಾಡಬಲ್ಲೆ" ಅನ್ನುವ ಮನೋಭಾವ. ಸ್ವಾಮಿ ವಿವೇಕಾನಂದರು ಒಂದು ಕಡೆ ಹೇಳಿದ್ದಾರೆ 'ಎಲ್ಲಾ ಶಕ್ತಿಯೂ ನಿಮ್ಮೊಳಗೇ ಇದೆ. ನೀವು ಏನನ್ನಾದರೂ, ಮತ್ತು ಎಲ್ಲವನ್ನೂ ಮಾಡಬಲ್ಲಿರಿ.' ನನ್ನ ಮಕ್ಕಳು ಅನೇಕ ವಿಷಯದಲ್ಲಿ ನನ್ನ ಗುರುಗಳು ಅಂತ ನಾನು ಹೇಳಬಹುದು. ನನ್ನ ಪುಟ್ಟ ಮಗಳನ್ನೇ ನೋಡಿ, ಯಾವುದು ಅಸಾಧ್ಯ ಅಂತ ಭಾವಿಸುತ್ತೆವೆಯೋ ಅದನ್ನು ಅವಳು ಸುಳ್ಳು ಮಾಡಿಬಿಡುತ್ತಾಳೆ. ಉದಾಹರಣೆಗೆ ಅರೇಬಿಕ್ ಭಾಷೆ ನಮಗೆ ಗೊತ್ತಿಲ್ಲ. ಆದರೆ ಶಾಲೆಯಲ್ಲಿ ಅರೇಬಿಕ್ ಭಾಷೆಯಲ್ಲಿ ಅವಳ ತರಗತಿಯಲ್ಲಿ ಅವಳೇ ಪ್ರಥಮ. ನಮಗೆ ಅರೇಬಿಕ್ ಗಂಧಗಾಳಿ ಕೂಡ ಗೊತ್ತಿಲ್ಲ. ಅವಳಿಗೆ ನಾವು ಖಾಸಗಿ ಪಾಠಕ್ಕೆ ಕೂಡ ಕಳುಹಿಸುವುದಿಲ್ಲ. ಸ್ಕೇಟಿಂಗ್ ಕೂಡ ಅಷ್ಟೇ. ಸ್ಕೇಟಿಂಗ್ ಬೂಟುಗಳನ್ನು ತಂದು ಕೊಟ್ಟದ್ದು ಅಷ್ಟೇ. ಅವಳನ್ನು ಯಾವುದೇ ಸ್ಕೇಟಿಂಗ್ ತರಬೇತಿಗೆ ಕಳುಹಿಸಿಲ್ಲ. ಅವಳೇ ಕಲಿತುಕೊಂಡು ಈಗ ಚೆನ್ನಾಗಿ ಸ್ಕೇಟಿಂಗ್ ಮಾಡುತ್ತಾಳೆ. ಅವಳ ಮೆಚ್ಚಿನ ಪುಸ್ತಕದ ಬಿಡುಗಡೆಯ ದಿನಾಂಕ ಅವಳಿಗೆ ಮೊದಲೇ ಗೊತ್ತಿರುತ್ತೆ. ನನಗೆ ಪುಸ್ತಕ ಬಿಡುಗಡೆಯ ದಿನಾಂಕ ಹತ್ತಿರ ಬರುವಾಗ ಹೇಳುತ್ತಾಳೆ ಅಪ್ಪ ಆನ್ಲೈನ್ ನಲ್ಲಿ ಮುಂಗಡ ಪಾವತಿ ಮಾಡಿ ಪುಸ್ತಕ ತರಿಸುವ ವ್ಯವಸ್ಥೆ ಮಾಡು ಅಂತ. ಅಂದ್ರೆ ಪ್ರತಿಯೊಂದು ವಿಚಾರದಲ್ಲಿ ಅವಳಿಗೆ ಅದಮ್ಯ ವಿಶ್ವಾಸ ತಾನು ಮಾಡಬಲ್ಲೆ ಅಂತ. ಆ ವಿಶ್ವಾಸ ಅವಳಿಗೆ ಗೆಲುವನ್ನು ತಂದುಕೊಡುತ್ತಿದೆ. ನಿಜ ಗೆಳೆಯರೇ ಯಾವುದೇ ಕೆಲಸ ಕೈಗೆತ್ತಿಕೊಳ್ಳುವ ಮೊದಲು "ನಾನು ಇದನ್ನು ಮಾಡಬಲ್ಲೆ, ನನ್ನಿಂದ ಇದು ಸಾಧ್ಯವಿದೆ.? ಅನ್ನುವ ಮನೋಭಾವ ನಮ್ಮೊಳಗೇ ಬಂದು ಬಿಟ್ಟರೆ ಅರ್ಧ ಕೆಲಸ ಮುಗಿದಂತೆ. ಯಾವುದಾದರೂ ಕೆಲಸ ಕಷ್ಟವೆನಿಸಿದಾಗ, 'ನಾನು ಇದನ್ನು ಕಲಿಯಬಲ್ಲೆ' ಎಂದು ನಮಗೆ ನಾವೇ ಹೇಳಿಕೊಂಡು ಮೊದಲ ಹೆಜ್ಜೆಯಿಡಬೇಕು. ತಪ್ಪಾದರೆ ಅದರಿಂದ ಕಲಿತು ಮತ್ತೆ ಪ್ರಯತ್ನಿಸಬೇಕು. ಒಂದು ಕಾಲದಲ್ಲಿ ನಿಮ್ಮಿಂದ ಸಾಧ್ಯವಿಲ್ಲ ಎಂದುಕೊಂಡಿದ್ದ ಕೆಲಸವನ್ನು ಸಾಧಿಸಿದಾಗ, ನಮ್ಮ ಸಾಮರ್ಥ್ಯದ ಮೇಲಿನ ನಂಬಿಕೆ ಇನ್ನಷ್ಟು ಗಟ್ಟಿಯಾಗುತ್ತದೆ.

ನೀವು ಅರುಣಿಮಾ ಸಿನ್ಹಾ ಹೆಸರು ಕೇಳಿರಬೇಕು. ಆಕೆ ರಾಷ್ಟ್ರೀಯ ಮಟ್ಟದ ವಾಲಿಬಾಲ್ ಆಟಗಾರ್ತಿ. ಅರೆಸೇನಾ ಪಡೆಗೆ ಕೆಲಸಕ್ಕೆ ಸೇರಬೇಕೆಂಬ ಆಸೆ ಅವಳಿಗಿತ್ತು. ಕೇಂದ್ರ ಕೈಗಾರಿಕಾ ಭದ್ರತಾ ಪಡೆಯಿಂದ (CISF) ಕರೆಪತ್ರ ಕೂಡ ಬಂದಿತ್ತು. ಸಂದರ್ಶ

SIGNIS Karnataka Embraces AI Era - Honours `SIGNIS Asia President Fr Victor Vijay Lobo'

Exploring the changing dimensions of communication in the digital age and reaffirming the importance of human values in an increasingly technology-driven world, SIGNIS Karnataka, the Catholic Association for Communication, organised its Regional Study and Assembly 2026 at Saint Anthony's Church, Kulur, Mangaluru. Held under the theme "AI and Human Communication: Upholding Humanitas in the Digital Age," the programme brought together Catholic communication professionals and members for insightful discussions, professional enrichment, organisational deliberations and fellowship. A special highlight of the gathering was the felicitation of Rev. Fr Victor Vijay Lobo on his election as President of SIGNIS Asia, marking a proud moment for SIGNIS Karnataka.AI and Humanitas - Putting Humanity at the Heart of Communication:The morning study sessions focused on the growing influence of artificial intelligence and the responsibility of the Church in ensuring that technological progress remains rooted in human dignity, truth and ethical values.Dr Juby Thomas, Director, Centre for Consultancy and Corporate Training, Kristu Jayanti Deemed to be University, Bengaluru, delivered an insightful session titled "AI and Human Communication: Redefining the Role of the Catholic Church." He examined how artificial intelligence is transforming communication and highlighted the opportunities and challenges it presents to the Church. His session emphasised the importance of embracing emerging technologies without compromising human dignity, meaningful relationships and the fundamental values of communication.The second session, "Magnifica Humanitas: A Framework for Catholic Communicators," was led by Rev. Fr Jovin Sequeira, Assistant Director, Canara Communication Centre. Drawing inspiration from the Vatican document Magnifica Humanitas and the vision of Pope Leo XIV, he highlighted the importance of human-centred communication in Catholic media. The session stressed that technology must remain a tool in the service of humanity, truth and the evangelising mission of the Church.Regional Assembly Reviews Progress and Future Priorities:The Regional Assembly commenced at 12.15 p.m. with prayer, followed by the welcome address by Secretary Rev. Fr Roshan Dsouza.The assembly was presided over by Rev. Fr Richard Dsouza, President of SIGNIS Karnataka. The leadership team comprised Vincent Mascarenhas, Vice President; Rev. Fr Roshan Dsouza, Secretary; and Rev. Fr Anil Ivan Fernandes, Treasurer.The gathering was honoured by the presence of Rev.



Fr Victor Vijay Lobo, President of SIGNIS India and newly elected President of SIGNIS Asia.The proceedings included the review and approval of the previous meeting's minutes, membership roll call and accreditation, introduction and approval of new members, presentation of accounts and discussions on membership-related matters.Members also deliberated on the organisation's future activities and strategic priorities, particularly preparations for SINA 2027 and the selection of the Lifetime Achievement Award. The participants shared their respective activities, experiences and initiatives in Catholic communication, providing an opportunity to strengthen collaboration and exchange ideas.President Calls for Stronger Collaboration and Active Participation:In his presidential address, Rev. Fr Richard Dsouza emphasised the need to strengthen SIGNIS Karnataka as a dynamic and vibrant platform for Catholic communication. He called for greater member participation, professional collaboration and purposeful initiatives to advance the organisation's mission.He encouraged members to contribute actively through their expertise and collective efforts while responding constructively to the emerging challenges and opportunities in media and communication. He also highlighted the importance of forward planning, strengthening regional activities and preparing for forthcoming national and international engagements.Addressing the assembly, Rev. Fr Victor Vijay Lobo shared his perspectives on the broader mission of SIGNIS India and the preparations for SINA 2027, underlining the importance of unity, collaboration and a shared commitment to Catholic communication.SIGNIS Karnataka Honours Newly Elected SIGNIS Asia President:One of the most memorable moments of the assembly was the special felicitation of Fr Victor Vijay Lobo in recognition of his election as President of SIGNIS Asia.On behalf of SIGNIS Karnataka, members honoured him for his dedicated contribution to Catholic communication, leadership and longstanding association with the organisation. Rev. Fr Anil Ivan Fernandes, Treasurer of SIGNIS Karnataka, read the citation and address of honour, recalling his journey and commitment to the mission of Catholic media.Receiving the honour, Fr Victor Vijay Lobo expressed his gratitude and emotional attachment to SIGNIS Karnataka. Recalling his association with the organisation, he remarked:"I cannot forget the roots from where I came. I joined SIGNIS Karnataka as the Director of Canara Communication Centre. I grew with SIGNIS, and I remain deeply grateful for the journey. I am happy and grateful for this honour."He thanked the members for their affection and recognition and shared his vision for his new responsibility as President of SIGNIS Asia. He expressed his commitment to strengthening cooperation among SIGNIS member countries, advancing the organisation's mission across Asia and promoting meaningful communication in the service of humanity and the Gospel.The felicitation was particularly significant for SIGNIS Karnataka, as one of its former leaders and members assumed a prestigious leadership position at the Asian level, bringing pride and recognition to the regional organisation.Renewed Commitment to Ethical and Human-Centred Communication:The SIGNIS Karnataka Regional Study and Assembly 2026 served as an important platform for reflection, professional development and organisational renewal. The discussions reinforced the message that although artificial intelligence and digital technologies are rapidly transforming the media landscape, the human person must always remain at the centre of communication.The gathering called upon Catholic communicators to move beyond merely adopting new technologies and instead use them responsibly to uphold truth, promote human dignity, encourage meaningful dialogue, strengthen relationships and serve society.With renewed enthusiasm, shared vision and a commitment to professional excellence, SIGNIS Karnataka reaffirmed its mission of advancing responsible, ethical and human-centred communication in the service of the Church and society.The assembly concluded with a vote of thanks, marking a memorable day of intellectual engagement, organisational fellowship and renewed dedication to the mission of Catholic communication.SIGNIS Karnataka continues its journey of communicating hope, connecting hearts and transforming lives through the power of responsible and human-centred communication.

A Triumphant Return - Saint Agnes PU College Welcomes Riddhi Back with Love, Joy and Tears of Happiness



In a heartwarming celebration filled with joy, gratitude and emotion, Saint Agnes PU College welcomed back its beloved student, 16-year-old Riddhi Priyal, after a challenging four-month battle with serious health complications. Her return to the college campus was not just a homecoming but a celebration of courage, resilience, hope and the triumph of the human spirit.Four months ago, Riddhi was fighting a critical health battle and was admitted to KMC Hospital, Mangaluru, where she required advanced life support through VA-ECMO (Veno-Arterial Extracorporeal Membrane Oxygenation). Her condition was extremely serious, requiring intensive medical care and continuous monitoring. VA-ECMO support played a crucial role in maintaining her heart and lung functions while she underwent specialised treatment.Her journey towards recovery was long and challenging. Throughout this difficult period, her family held on to hope and prayers, while the college community, teachers and friends eagerly wished and prayed for her safe return.That long-awaited moment finally arrived as Riddhi stepped back onto the campus of Saint Agnes PU College. She was welcomed with immense affection in the presence of her parents, the Principal, faculty members, students and PTA representatives. The occasion was filled with heartfelt emotions as the entire college community came together to celebrate her return.The Principal expressed her immense happiness at seeing Riddhi back on campus and acknowledged the unwavering support of her parents, the prayers and concern of the teaching and non-teaching staff, and the love and affection extended by her classmates and fellow students. One of the most touching moments of the welcome was when Riddhi's classmates sang songs for her. Their heartfelt singing deeply moved everyone present, bringing tears of happiness to many eyes. It was a beautiful expression of friendship, love and the special bond shared by the students.Riddhi's homecoming was much more than a welcome ceremony. It reflected the true spirit of an educational institution — a place where compassion goes beyond classrooms, friendships become a source of strength, and an entire community stands together during life's most difficult moments.

Her inspiring journey is a reminder that courage, hope, family support and collective prayers can bring light even through the darkest moments. For the Saint Agnes PU College family, Riddhi's return will remain an unforgettable and cherished occasion. As she begins this new chapter of her life, the entire college community wishes her continued good health, happiness, renewed confidence and a bright future filled with countless achievements.

A New Beginning for Hearts: 'Meet & Greet Gala – Season 2' on November 29 in Mangaluru

Creating opportunities for young men and women to meet their prospective life partners in a friendly, joyful and welcoming atmosphere, the second edition of 'Meet & Greet Gala – Season 2' will be held on Sunday, November 29, 2026, at Shanthi Kiran Pastoral Institute, Bajjodi, Mangaluru, from 9.00 am to 4.00 pm. The event is jointly organised by the Family Life Service Centre (FLSC), Diocese of Mangalore, and Catholic Connect Matrimony, Bengaluru. Moving beyond conventional matrimonial introductions, the gala offers a unique and interactive platform for eligible young men and women to meet, get to know one another, exchange thoughts and explore meaningful relationships that could lead to a happy and fulfilling married life.The day-long programme will begin with Holy Mass, followed by interesting ice-breaking sessions, interactive activities and informal conversations designed to help participants feel comfortable and discover common interests. The organisers have planned a relaxed and enjoyable atmosphere where prospective brides and grooms can interact freely and establish genuine connections. Tea, snacks and lunch will also be provided to all participants. The initiative reflects the organisers' commitment to guiding young people towards meaningful relationships and helping them take thoughtful and confident steps towards building strong, happy and lasting families. Eligibility and Registration Details: Age Limit: Up to 45 years, Educational Qualification: Graduation and above, Registration Fee: ₹500, Last Date for Registration: November 23, 2026, Interested candidates can register online through the official website: www.catholicconnectmatrimony.com/event. Online Registration Link:https://pages.razorpay.com/ pl_TegQ37ZICecbuB/view For further details and enquiries, contact: Marina Dsa: 90363 93344, Kavitha Stephen: 90366 13344, Family Life Service Centre: 82779 37792The organisers invite eligible young men and women to make the most of this opportunity to meet new people, build meaningful friendships and perhaps take the first step towards a beautiful journey of togetherness.

Saint Aloysius University Invites Applications for Professional M.A. in Konkani



Providing a unique opportunity to promote the Konkani language while developing professional skills, the Department of Konkani and the Institute of Konkani at Saint Aloysius (Deemed to be University), Mangaluru, have invited applications for the M.A. in Professional Konkani programme for the academic year 2027–28.The programme is designed to blend the rich literary and cultural heritage of Konkani with emerging professional opportunities in fields such as media, journalism, translation, technology, theatre, cinema and digital content creation. Recognising the importance of Konkani as the mother tongue of communities spread across Goa, Maharashtra, Kerala and coastal Karnataka, the course aims to nurture language skills while preparing students for diverse career opportunities in the modern professional world.Moving beyond conventional classroom-based and text-oriented learning, the programme places special emphasis on practical, skill-based education. Students will benefit from internships, apprenticeships, an Earn While You Learn scheme and various workshops, providing valuable exposure to real-world professional environments.Eligibility and Admission Details: Educational Qualification: Graduation in any discipline. Minimum Marks: 45% at the undergraduate level. Konkani at UG Level: Not compulsory. Age Limit: No age restriction. Medium and Script: The course will be conducted in Kannada, Roman or Devanagari scripts.The programme welcomes graduates from all academic backgrounds who are interested in Konkani language, literature, culture and its growing professional applications. Interested candidates can submit their applications online through the university admission portal. Online Application: https://apply.staloysius.edu.in/, University Website: https://staloysius.edu.in/For Further Details: Phone: 0824-2007394, Mobile: 94815 27394Through this innovative academic initiative, Saint Aloysius University seeks to strengthen the presence of Konkani in contemporary professional fields while creating new opportunities for graduates to build careers rooted in language, culture and creativity.

Lions Club Ladyhill Empowers 10,000 Students Through `STEM'



Theatre lovers and families in Mangaluru are in for a spectacular treat as "The Lion King – A Legacy Retold", presented by The Yenepoya School, is set to enthral audiences on 2026 December 5 at 6.30 p.m. at the Father Muller Convention Centre, Mangaluru. Inspired by the much-loved 1994 animated classic, the theatrical production brings to life the inspiring journey of young Simba as he faces challenges, discovers his true identity and embraces his destiny as the King of the Pride Lands. Promising a captivating blend of drama, music, dance and visual artistry, the production will feature impressive African-inspired puppetry, creative mask designs, vibrant costumes and an expanded musical score. The performance offers a fresh and engaging interpretation of the timeless story while retaining its central themes of courage, family, responsibility, leadership and self-discovery.Organised by The Yenepoya School, this student-led production highlights the institution's commitment to nurturing creativity, artistic expression and holistic education. It provides a platform for young performers to showcase their talents in acting, singing, music, dance and technical theatre while developing confidence, teamwork and artistic excellence. With its powerful storyline, memorable characters and spectacular stage presentation, The Lion King – A Legacy Retold promises an unforgettable experience for audiences of all ages. Families, students, theatre enthusiasts and members of the public are invited to witness this grand theatrical presentation and encourage the young performers as they bring the magic of the African savannah to life on stage. Event Details: Event: The Lion King – A Legacy Retold, Organiser: The Yenepoya School, Date: Saturday, December 5, 2026, Time: 6.30 p.m., Venue: Father Muller Convention Centre, Mangaluru, Language: English, Duration: 2 hours, Tickets: ₹399 onwardsTicket Booking: https://in.bookmyshow.com/plays/the-lion-king-a-legacy-retold/etea1s7n07 The evening promises to be a memorable celebration of theatre, music, imagination and young talent, bringing a timeless tale of courage and destiny to life for Mangaluru audiences.

Saint Mary's PU College Inaugurates Silver Jubilee Celebrations

Marking a significant milestone in its journey of academic excellence and value-based education, Saint Mary's PU College, Falnir, Mangaluru, celebrated the Establishment Day of the Apostolic Carmel in India with great enthusiasm. The occasion also marked the grand inauguration of the college's Silver Jubilee celebrations, commemorating 25 years of dedicated service in the field of education.The celebrations were highlighted by three significant ceremonies — the lighting of the Silver Jubilee Torch, the unveiling of the Silver Jubilee emblem and the presentation of the Silver Jubilee Charter, symbolising the institution's journey, achievements and aspirations for the future. The programme was graced by Sr Edna Furtado A.C., Administrator of Saint Ann's Teacher Training Institution, Mangaluru, as the Chief Guest. Sonal Caren Dsouza, Founder of Urban Groove – Dance and Fitness Studio, and Shyamala Raj, retired Lecturer in Mathematics at Saint Mary's PU College, Falnir, were the Guests of Honour.Sr Celine Veera A.C., Joint Secretary of Saint Mary's Institution, and Sr Maria Gracilda, Principal of Saint Mary's PU College, were also present on the occasion. A major attraction of the celebration was a captivating dance drama depicting the life, struggles and mission of Mother Veronica, the Foundress of the Apostolic Carmel Congregation. Through a beautiful blend of dance, music and dramatic presentation, the performance brought alive Mother



Veronica's vision, dedication and pioneering contribution to the Apostolic Carmel mission, leaving the audience deeply inspired. The celebration was not merely a commemoration of 25 years of the institution's existence but also a tribute to its enduring commitment to quality education, character formation and the holistic development of young minds. As Saint Mary's PU College embarks on its Silver Jubilee journey, the milestone stands as a proud reflection of its legacy of dedication, transformation and countless achievements, while renewing its commitment to shaping responsible, confident and value-oriented future generations.

NITK 24ನೇ ಘಟಿಕೋತ್ಸವದಲ್ಲಿ ಸಾಧನೆಯ ಸಂಭ್ರಮ - 1,986 ಪದವಿಗಳ ಪ್ರದಾನ

46 ಪ್ರತಿಭಾವಂತರಿಗೆ ಚಿನ್ನದ ಪದಕ - ಭಾರತದ ಭವಿಷ್ಯ ರೂಪಿಸಲು ಯುವ ಇಂಜಿನಿಯರ್‌ಗಳಿಗೆ ಗಣ್ಯರ ಕರೆ







ಜ್ಞಾನ, ಪರಿಶ್ರಮ, ಸಾಧನೆ ಮತ್ತು ಹೊಸ ಕನಸುಗಳ ಸಂಭ್ರಮಕ್ಕೆ ಸಾಕ್ಷಿಯಾದ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಕರ್ನಾಟಕ (NITK), ಸುರತ್ಕಲ್‌ನ 24ನೇ ವಾರ್ಷಿಕ ಘಟಿಕೋತ್ಸವವು ಸಂಸ್ಥೆಯ ಸಿಲ್ವರ್ ಜೂಬಿಲಿ ಸಭಾಂಗಣದಲ್ಲಿ ವಿಜೃಂಭಣೆಯಿಂದ ನಡೆಯಿತು. ಉನ್ನತ ಶಿಕ್ಷಣದ ಹಂತವನ್ನು ಯಶಸ್ವಿಯಾಗಿ ಪೂರೈಸಿ ವೃತ್ತಿಜೀವನದ ಹೊಸ ಪಯಣಕ್ಕೆ ಸಜ್ಜಾದ ವಿದ್ಯಾರ್ಥಿಗಳ ಪಾಲಿಗೆ ಇದು ಸ್ಮರಣೀಯ ಕ್ಷಣವಾಗಿದ್ದು, ಒಟ್ಟು 1,986 ಪದವಿಗಳನ್ನು ಪ್ರದಾನ ಮಾಡುವ ಮೂಲಕ ಸಂಸ್ಥೆಯ ಶೈಕ್ಷಣಿಕ ಸಾಧನೆಯ ಮತ್ತೊಂದು ಮಹತ್ವದ ಮೈಲಿಗಲ್ಲು ದಾಖಲಾಗಿದೆ.

ಇಂಡಿಯನ್ ನ್ಯಾಷನಲ್ ಅಕಾಡೆಮಿ ಆಫ್ ಎಂಜಿನಿಯರಿಂಗ್ (INAE) ಅಧ್ಯಕ್ಷರು ಹಾಗೂ ಇನ್-ಸ್ಪೇಸ್ (IN-SPACe) ಮಂಡಳಿ ಸದಸ್ಯರಾದ ಜೆ.ಡಿ. ಪಾಟೀಲ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. NITK ಆಡಳಿತ ಮಂಡಳಿ ಅಧ್ಯಕ್ಷ ಎಂ.ಎಂ. ಮುರುಗಪ್ಪನ್ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ನಿರ್ದೇಶಕ ಪ್ರೊ. ಬಿ. ರವಿ, ಉಪನಿರ್ದೇಶಕ ಪ್ರೊ. ಸುಭಾಷ್ ಸಿ. ಯಾರಗಲ್, ಆಡಳಿತ ಮಂಡಳಿ ಮತ್ತು ಸೆನೆಟ್ ಸದಸ್ಯರು ಉಪಸ್ಥಿತರಿದ್ದರು.

ಎರಡು ಅಧಿವೇಶನಗಳಲ್ಲಿ ನಡೆದ ಘಟಿಕೋತ್ಸವದಲ್ಲಿ ಪೂರ್ವಾಹ್ನ ಸ್ನಾತಕೋತ್ತರ ಹಾಗೂ ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಮತ್ತು ಅಪರಾಹ್ನ ಪದವಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಒಟ್ಟು 967 ಬಿ.ಟೆಕ್., 680 ಎಂ.ಟೆಕ್., 12 ಎಂ.ಟೆಕ್. (ರಿಸರ್ಚ್), 66 ಎಂಸಿಎ, 74 ಎಂಬಿಎ, 68 ಎಂ.ಎಸ್ಸಿ ಹಾಗೂ 119 ಪಿಎಚ್.ಡಿ. ಪದವಿಗಳನ್ನು ಪ್ರದಾನ ಮಾಡಲಾಯಿತು. ಶೈಕ್ಷಣಿಕ ಸಾಧನೆಯಲ್ಲಿ ಅತ್ಯುತ್ತಮ ಪ್ರತಿಭೆ ಮೆರೆದ 11 ಬಿ.ಟೆಕ್. ಹಾಗೂ 35 ಸ್ನಾತಕೋತ್ತರ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 46 ಮಂದಿಗೆ ಚಿನ್ನದ ಪದಕ ಮತ್ತು ವಿವಿಧ ಸಂಸ್ಥೆಗಳ ಪ್ರಾಯೋಜಿತ ಪದಕಗಳನ್ನು ನೀಡಿ ಗೌರವಿಸಲಾಯಿತು.

ಭಾರತದ ಅಭ್ಯುದ್ಧಿಗೆ ಯುವಶಕ್ತಿಯ ಕೊಡುಗೆ ಅಗತ್ಯ - ಎಂ.ಎಂ. ಮುರುಗಪ್ಪನ್:

ಘಟಿಕೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಆಡಳಿತ ಮಂಡಳಿ ಅಧ್ಯಕ್ಷ ಎಂ.ಎಂ. ಮುರುಗಪ್ಪನ್, ಪದವೀಧರರು, ಪೋಷಕರು ಮತ್ತು ಅಧ್ಯಾಪಕರನ್ನು ಅಭಿನಂದಿಸಿ, 'ಕಲಿಕೆ ಎನ್ನುವುದು ಪದವಿ ಪಡೆಯುವುದರೊಂದಿಗೆ ಮುಗಿಯುವ ಪ್ರಕ್ರಿಯೆಯಲ್ಲ; ಅದು ಜೀವನಪರ್ಯಂತ ಮುಂದುವರಿಯಬೇಕಾದ ಪಯಣ ಎಂದು ಅಭಿಪ್ರಾಯಪಟ್ಟರು. ತರಗತಿಯ ನಾಲ್ಕು ಗೋಡೆಗಳಾಚೆ ಪಡೆಯುವ ಅನುಭವ ಮತ್ತು ಜ್ಞಾನವು ವ್ಯಕ್ತಿತ್ವದ ಸಮಗ್ರ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡುತ್ತದೆ' ಎಂದು ಹೇಳಿದರು. ವಿದ್ಯಾರ್ಥಿಗಳಲ್ಲಿ ನವೋದ್ಯಮ ಮತ್ತು ಉದ್ಯಮಶೀಲತೆಯನ್ನು ಬೆಳೆಸುವ ಉದ್ದೇಶದಿಂದ ಎನ್‌ಐಟಿಕೆ ರೂಪಿಸಿರುವ ಐಡಿಯಾ ಫ್ಯಾಕ್ಟರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಉದ್ಯಮಿಗಳ ಉದ್ಯಾನ (STEP) ಸೌಲಭ್ಯಗಳನ್ನು ಉಲ್ಲೇಖಿಸಿದ ಅವರು, ಈವರೆಗೆ 150ಕ್ಕೂ ಹೆಚ್ಚು ಕಂಪನಿಗಳು ಸಂಸ್ಥೆಯ ಮೂಲಕ ಪೋಷಣೆ ಪಡೆದಿರುವುದು ಹೆಮ್ಮೆಯ ಸಂಗತಿ ಎಂದರು. ವಿದ್ಯಾರ್ಥಿಗಳ ಜೀವನ ಕೌಶಲ್ಯ ಮತ್ತು ವ್ಯಕ್ತಿತ್ವ ವಿಕಸನಕ್ಕೂ ಸಂಸ್ಥೆ ವಿಶೇಷ ಆದ್ಯತೆ ನೀಡುತ್ತಿದೆ ಎಂದು ತಿಳಿಸಿದರು.

ಜಾಗತಿಕ ರಾಜಕೀಯ ಮತ್ತು ಆರ್ಥಿಕ ಅನಿಶ್ಚಿತತೆಗಳ ನಡುವೆಯೂ ಭಾರತ ದೃಢವಾಗಿ ಮುನ್ನಡೆಯುತ್ತಿದೆ. ದೇಶದ ಮುಂದಿನ ಬೆಳವಣಿಗೆಗೆ ಯುವ ಪದವೀಧರರ ಶಕ್ತಿ, ಉತ್ಸಾಹ ಮತ್ತು ಸೃಜನಶೀಲತೆ ಅತ್ಯಗತ್ಯ. ಜಗತ್ತು ನಿಮ್ಮ ಮುಂದೆ ಅಪಾರ ಅವಕಾಶಗಳನ್ನು ತೆರೆದಿಟ್ಟಿದೆ. ಅವುಗಳನ್ನು ಗುರುತಿಸಿ ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಕೃತಕ ಬುದ್ಧಿಮತ್ತೆಯ ಕುರಿತು ಮಾತನಾಡಿದ ಅವರು, AI ಅನ್ನು ಅಪಾಯವಾಗಿ ನೋಡುವ ಬದಲು ಸಂಸ್ಥೆಗಳ ಸಾಮರ್ಥ್ಯವನ್ನು ಹೆಚ್ಚಿಸುವ ಅವಕಾಶವಾಗಿ ಬಳಸಿಕೊಳ್ಳಬೇಕು ಎಂದರು. ಆದರೆ ತಂತ್ರಜ್ಞಾನದಿಂದ ಮಾನವನ ತೀರ್ಮಾನಶಕ್ತಿ, ನೈತಿಕ ಚಿಂತನೆ, ವಿಶ್ವಾಸ ಗಳಿಸುವ ಸಾಮರ್ಥ್ಯ ಮತ್ತು ಮಾನವೀಯ ಗುಣಗಳನ್ನು ಸಂಪೂರ್ಣವಾಗಿ ಬದಲಾಯಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು. ತಂತ್ರಜ್ಞಾನವನ್ನು ಮಾನವ ಕಲ್ಯಾಣ ಹಾಗೂ ಪರಿಸರ ಸಂರಕ್ಷಣೆಗೆ ಬಳಸಿಕೊಂಡು ವಿನಯ, ನಿಷ್ಠೆ ಮತ್ತು ದೃಢಸಂಕಲ್ಪದೊಂದಿಗೆ ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವಂತೆ ಪದವೀಧರರಿಗೆ ಸಲಹೆ ನೀಡಿದರು.

ವೃತ್ತಿಜೀವನ ಹೊಸ ಜನ್ಮವಿದ್ದಂತೆ - ಜೆ.ಡಿ. ಪಾಟೀಲ್:

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜೆ.ಡಿ. ಪಾಟೀಲ್ ಅವರು ಘಟಿಕೋತ್ಸವ ಭಾಷಣದಲ್ಲಿ 'ವಿದ್ಯಾರ್ಥಿ ಜೀವನದಿಂದ ವೃತ್ತಿಪರ ಬದುಕಿಗೆ ಕಾಲಿಡುವ ಹಂತವನ್ನು ಹೊಸ ಜನ್ಮಕ್ಕೆ ಹೋಲಿಸಿದರು. ಪೋಷಕರಿಂದ ದೊರೆತ ಮೊದಲ ಜನ್ಮ, ಶಿಕ್ಷಣದ ಮೂಲಕ ದೊರೆತ ಎರಡನೇ ಜನ್ಮದ ನಂತರ, ಇದೀಗ ವಿದ್ಯಾರ್ಥಿಯಿಂದ ವೃತ್ತಿಪರನಾಗುವ ಮೂರನೇ ಹೊಸ ಹಂತಕ್ಕೆ ಪದವೀಧರರು ಪ್ರವೇಶಿಸುತ್ತಿದ್ದಾರೆ' ಎಂದು ವಿಶ್ಲೇಷಿಸಿದರು.

'ನೈಜ ಜೀವನದ ಸಮಸ್ಯೆಗಳನ್ನು ಪರಿಹರಿಸಲು ಯಾವುದೇ ಸಿದ್ಧ ಉತ್ತರಗಳ ಕೈಪಿಡಿ ಇರುವುದಿಲ್ಲ. ಪ್ರತಿಯೊಂದು ಸವಾಲನ್ನೂ ಎದುರಿಸುವ ಸಾಮರ್ಥ್ಯವನ್ನು ನೀವೇ ಬೆಳೆಸಿಕೊಳ್ಳಬೇಕು,' ಎಂಬ ಅವರ ಮಾತು ಪದವೀಧರರಿಗೆ ವಾಸ್ತವ ಬದುಕಿನ ಸವಾಲುಗಳನ್ನು ನೆನಪಿಸಿತು.

ವಿದ್ಯಾರ್ಥಿ ಜೀವನದಲ್ಲಿ ವಿಷಯಗಳನ್ನು ಪ್ರತ್ಯೇಕವಾಗಿ ಕಲಿಯುವ ಅವಕಾಶವಿದ್ದರೆ, ವ್ಯಕ್ತಿಜೀವನದಲ್ಲಿ ವಿವಿಧ ಕ್ಷೇತ್ರಗಳ ಜ್ಞಾನ ಮತ್ತು ಕೌಶಲ್ಯಗಳನ್ನು ಸಮನ್ವಯಗೊಳಿಸಿ ಕೆಲಸ ಮಾಡಬೇಕಾಗುತ್ತದೆ ಎಂದು ಅವರು ತಿಳಿಸಿದರು. ಮುಂದಿನ ಎರಡು ದಶಕಗಳಲ್ಲಿ ಭಾರತದ ಆರ್ಥಿಕತೆ ಹಲವು ಪಟ್ಟು ಬೆಳೆಯುವ ನಿರೀಕ್ಷೆಯಿದ್ದು, ಆ ಬೆಳವಣಿಗೆಯಲ್ಲಿ ಇಂಜಿನಿಯರ್‌ಗಳ ಪಾತ್ರ ಅತ್ಯಂತ ಮಹತ್ವದ್ದಾಗಿರಲಿದೆ ಎಂದರು.

ಕೃತಕ ಬುದ್ಧಿಮತ್ತೆ, ಸೆಮಿಕಂಡಕ್ಟರ್‌ಗಳು, ಕ್ವಾಂಟಮ್ ತಂತ್ರಜ್ಞಾನ ಮತ್ತು ಗುರಿನಿರ್ದಿಷ್ಟ ಔಷಧ ವಿತರಣೆಯಂತಹ ಉದಯೋನ್ಮುಖ ಕ್ಷೇತ್ರಗಳಲ್ಲಿ ಅಪಾರ ಅವಕಾಶಗಳಿವೆ. ಯುವ ಇಂಜಿನಿಯರ್‌ಗಳು ಇಂತಹ ಕ್ಷೇತ್ರಗಳಲ್ಲಿ ತಮ್ಮ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಆತ್ಮನಿರ್ಭರತೆ ಎಂದರೆ ನಮ್ಮ ಭವಿಷ್ಯದ ಮೇಲೆ ನಾವೇ ನಿಯಂತ್ರಣ ಹೊಂದುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು. ದೇಶದ ಕಾರ್ಯತಂತ್ರದ ತಂತ್ರಜ್ಞಾನಗಳು ಮತ್ತು ಡಿಜಿಟಲ್ ವ್ಯವಸ್ಥೆಗಳು ಸ್ವಾವಲಂಬಿಯಾಗಿರುವುದು ಅತ್ಯಗತ್ಯ ಎಂದು ಅವರು ಒತ್ತಿಹೇಳಿದರು. ಭಾರತ-2047ರ ಕನಸನ್ನು ನನಸು ಮಾಡುವ ಜವಾಬ್ದಾರಿ ಇಂದಿನ ಯುವ ಪೀಳಿಗೆಯ ಮೇಲಿದೆ. ತಮ್ಮ ಮುಂದಿರುವ ಸುಮಾರು 50 ವರ್ಷಗಳ ಉತ್ಪಾದಕ ಜೀವನವನ್ನು ರಾಷ್ಟ್ರ ನಿರ್ಮಾಣಕ್ಕೆ ಸಮರ್ಪಿಸಬೇಕು ಎಂದು ಸಲಹೆ ನೀಡಿದರು.

ನವೀನ ಪಠ್ಯಕ್ರಮ, ಸ್ಟಾರ್ಟ್‌ಅಪ್‌ಗಳು ಮತ್ತು ಸಂಶೋಧನೆಯಲ್ಲಿ ಎನ್‌ಐಟಿಕೆ ಸಾಧನೆ:

ಸಂಸ್ಥೆಯ ನಿರ್ದೇಶಕ ಪ್ರೊ. ಬಿ. ರವಿ ಅವರು ವಾರ್ಷಿಕ ವರದಿ ಮಂಡಿಸಿ, ಮೂಲಸೌಕರ್ಯ ಅಭಿವೃದ್ಧಿ, ಅಧ್ಯಾಪಕ ವೃಂದ, ಸಂಶೋಧನೆ, ಆಡಳಿತ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಂಸ್ಥೆ ಸಾಧಿಸಿರುವ ಪ್ರಗತಿಯನ್ನು ವಿವರಿಸಿದರು. ಆವಿಷ್ಕಾರ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುವ ಹೊಸ ನೀತಿಗಳು, ತರಬೇತಿ ಕಾರ್ಯಕ್ರಮಗಳು, ಪೇಟೆಂಟ್ ಅರ್ಜಿಗಳು, ತಂತ್ರಜ್ಞಾನ ಪರವಾನಗಿ ಚಟುವಟಿಕೆಗಳು ಹಾಗೂ ಎನ್‌ಐಟಿಕೆ ಸ್ಟಾರ್ಟ್‌ಅಪ್‌ಗಳ ಯಶಸ್ಸು ಗಮನಾರ್ಹವಾಗಿವೆ ಎಂದರು. 2026-30ರ ಬ್ಯಾಚ್‌ಗಾಗಿ ಮರುವಿನ್ಯಾಸಗೊಳಿಸಲಾದ ಬಿ.ಟೆಕ್. ಪಠ್ಯಕ್ರಮ, ಅಕ್ಟೋಬರ್ 6ರಂದು ಉದ್ಘಾಟನೆಗೊಂಡ 30 ಮಿಲಿಯನ್ ಲೀಟರ್ ಸಾಮರ್ಥ್ಯದ 'ನಿಟ್ಕೆರೆ (NITKere) ಮಳೆನೀರು ಕೊಯ್ಲು ವ್ಯವಸ್ಥೆ' ಹಾಗೂ ಅದೇ ದಿನ ಸಂಸ್ಥೆಯ ಮುಖ್ಯ ಕಟ್ಟಡದ ಮುಂಭಾಗದಲ್ಲಿ ಅನಾವರಣಗೊಂಡ ಭಾರತೀಯ ವಾಯುಪಡೆಯ 'MiG-21' ಯುದ್ಧ ವಿಮಾನವು ಈ ವರ್ಷದ ಪ್ರಮುಖ ಸಾಧನೆಗಳಾಗಿವೆ ಎಂದು ಅವರು ವಿವರಿಸಿದರು.

46 ಪ್ರತಿಭಾವಂತರಿಗೆ ಪದಕಗಳ ಗೌರವ:

ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಅತ್ಯಧಿಕ ಸಿಜಿಪಿಎ ಗಳಿಸಿ ಸಾಧನೆ ಮೆರೆದ 46 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ ವಿವಿಧ ಸಂಸ್ಥೆಗಳ ಪ್ರಾಯೋಜಿತ ಪದಕಗಳನ್ನು ಪ್ರದಾನ ಮಾಡಲಾಯಿತು. ಇವರಲ್ಲಿ 11 ಮಂದಿ ಬಿ.ಟೆಕ್. ವಿದ್ಯಾರ್ಥಿಗಳು ಮತ್ತು 35 ಮಂದಿ ಸ್ನಾತಕೋತ್ತರ ವಿದ್ಯಾರ್ಥಿಗಳು ಸೇರಿದ್ದಾರೆ. ಮುಖ್ಯ ಅತಿಥಿ ಜೆ.ಡಿ. ಪಾಟೀಲ್ ಹಾಗೂ ನಿರ್ದೇಶಕ ಪ್ರೊ. ಬಿ. ರವಿ ಅವರು ಪದಕಗಳನ್ನು ವಿತರಿಸಿ ಪ್ರತಿಭಾವಂತರನ್ನು ಅಭಿನಂದಿಸಿದರು.

ಪೋಷಕರ ಮೆಚ್ಚುಗೆ - ವಿದ್ಯಾರ್ಥಿಗಳಲ್ಲಿ ಹೊಸ ಕನಸುಗಳ ಸಂಭ್ರಮ:

ಘಟಿಕೋತ್ಸವದ ಅಂಗವಾಗಿ ಕ್ಯಾಂಪಸ್‌ನಲ್ಲಿ ಹಬ್ಬದ ವಾತಾವರಣ ಮನೆಮಾಡಿತ್ತು. ವಿದ್ಯಾರ್ಥಿಗಳು ತಮ್ಮ ಕುಟುಂಬದವರೊಂದಿಗೆ ಛಾಯಾಚಿತ್ರಗಳನ್ನು ತೆಗೆಸಿಕೊಂಡು, ಸ್ನೇಹಿತರೊಂದಿಗೆ ವಿದ್ಯಾರ್ಥಿ ಜೀವನದ ಸಿಹಿ ನೆನಪುಗಳನ್ನು ಹಂಚಿಕೊಂಡರು. ಸಾಧನೆಯ ಸಂತಸ, ಹೊಸ ಬದುಕಿನ ನಿರೀಕ್ಷೆ ಮತ್ತು ಅಗಲಿಕೆಯ ಭಾವನೆಗಳು ಒಂದೆಡೆ ಬೆರೆತಿದ್ದವು. ಈ ಸಂದರ್ಭದಲ್ಲಿ ಮಾತನಾಡಿದ ಪ್ರೊ. ಬಿ. ರವಿ, 'ಪದವೀಧರರ ಮುಂದಿನ ವೃತ್ತಿಜೀವನ ಯಶಸ್ವಿಯಾಗಲಿ, ಅವರ ಬದುಕು ಅರ್ಥಪೂರ್ಣವಾಗಲಿ' ಎಂದು ಹಾರೈಸಿದರು. 'ಎನ್‌ಐಟಿಕೆ ಅವರ ಮಾತೃಸಂಸ್ಥೆಯಾಗಿದ್ದು, ಅದರ ಬಾಗಿಲುಗಳು ಸದಾ ತೆರೆದಿರುತ್ತವೆ. ವಿದ್ಯಾರ್ಥಿಗಳು ಯಾವಾಗ ಬೇಕಾದರೂ ತಮ್ಮ ಎರಡನೇ ಮನೆಗೆ ಮರಳಬಹುದು' ಎಂದು ಆತ್ಮೀಯವಾಗಿ ಹೇಳಿದರು. ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಇಂಜಿನಿಯರಿಂಗ್ ವಿಭಾಗದಲ್ಲಿ ಬಿ.ಟೆಕ್. ಪದವಿ ಪಡೆದ ರಾಧಿಕಾ ಅವರ ತಾಯಿ, ಅಧ್ಯಾಪಕರ ಬೆಂಬಲ, ಕ್ಯಾಂಪಸ್ ನೇಮಕಾತಿ ಅವಕಾಶಗಳು ಹಾಗೂ ಪೋಷಕರಿಗಾಗಿ ಮಾಡಲಾಗಿದ್ದ ವ್ಯವಸ್ಥೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ವಿದ್ಯುತ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗದ ಪದವೀಧರ ಸುಮುಖಿ ಶೆಟ್ಟಿ ಅವರ ಪೋಷಕರು ಕಾರ್ಯಕ್ರಮವನ್ನು ಅತ್ಯುತ್ತಮವೆಂದು ಬಣ್ಣಿಸಿ, ಮಗನಿಗೆ ದೊರೆತ ಮಾರ್ಗದರ್ಶನ ಮತ್ತು ಬೆಂಬಲಕ್ಕಾಗಿ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿದರು. ಎನ್‌ಐಟಿಕೆಯ 24ನೇ ಘಟಿಕೋತ್ಸವವು ಕೇವಲ ಪದವಿ ಪ್ರದಾನದ ಸಮಾರಂಭವಾಗಿರದೆ, ಜ್ಞಾನವನ್ನು ಸಮಾಜದ ಒಳಿತಿಗೆ ಬಳಸುವ, ತಂತ್ರಜ್ಞಾನವನ್ನು ಮಾನವೀಯತೆಯೊಂದಿಗೆ ಬೆಸೆಯುವ ಹಾಗೂ ಭಾರತದ ಭವಿಷ್ಯ ನಿರ್ಮಾಣದಲ್ಲಿ ಪಾಲ್ಗೊಳ್ಳುವ ಹೊಸ ತಲೆಮಾರಿನ ಇಂಜಿನಿಯರ್‌ಗಳಿಗೆ ದಿಕ್ಕು ತೋರಿದ ಮಹತ್ವದ ಸಂದರ್ಭವಾಗಿ ಮೂಡಿಬಂತು.

FAMILY LIFE SERVICE CENTRE
MANGALORE DIOCESE

Catholic Connect MATRIMONY

ಸೈರಿಕೆಚ್ಯಾ ಸೊದ್ದೆರ್ ಆಸ್ಚ್ಯಾ
ಯುವಜಣಾಂಕ್
ಅಪೂರ್ವ್ ಅವ್ಯಾಸ್!

MEET & GREET Gala | SECOND EDITION

ಹಾತಾಕ್ ಹಾತ್ – ಜಿಣ್ಯೆ ಮೇಟ್

HOLY MASS INCLUDED



EVENT DATE: 29 Nov 2026
TIME: 9:00am – 4:00pm
REGISTRATION FEE: Rs. 500 only

VENUE
Shanthi Kiran, Pastoral Institute
Bajjodi, Mangalore

EVENT SCHEDULE
A Day of Engaging Interactions, Meaningful Connections, Tea, Snacks and Lunch

AGE
Up to 45 years

EDUCATION
Graduation and Above

REGISTRATION CLOSES ON 23rd NOV 2026

SCAN TO REGISTER

CONTACT US TO KNOW MORE
Marina D'Sa 90363 93344
Kavitha Stephen 90366 13344
Family Life Service Centre 82779 37792

www.catholicconnectmatrimony.com/event



If not delivered please return To:
ಕರಾವಳಿ ಸುದ್ದಿ
KARBIL/2015/62120 DAKSHINA KANNADA
Door Number 2-68/2B, Near Nithyadar Mansion, Mani Post & Village, Bantwala Taluku - 574 253. Mob.: 8431426747

PRGI No.: KARBIL/2015/62120
Post Without Prepayment License No.: SK/WPP/PTR/208/2026-28
Postal Regd No. : PTR/150/2026-28
MANGALORE RMS
Posted on 21st November 2026

Printed by SAINT JOSEPH PRINTERS Published by ROSHAN BONIFACE MARTIS on behalf of ROSHAN BONIFACE MARTIS, printed at Dakshina Kannada and published at Door Number 2-68/2B, Near NITHYADAR MANSION, MANI POST & VILLAGE, BANTWALA TALUKU, DAKSHINA KANNADA DISTRICT, KARNATAKA - 574 253 editor ROSHAN BONIFACE MARTIS.